# ಜ್ಞಾನಶಕ್ತಿ
ಮಾಸ ಪತ್ರಿಕೆ
JNANASHAKTHI




ಶ್ರೀ ಸುಬ್ರಹ್ಮಣ್ಯ ಸಭಾ (ರಿ.), ಮಂಗಳೂರು - 575 003

Postal Regd. No. MNG / 1023 / 2012-14
Date of Posting, Kodialbail post office
on 12th of every Month

ಸಂಪುಟ ೩ | ನೋಂದಣಿ ಸಂಖ್ಯೆ : KARBIL / 2005 / 16123 | ಫೆಬ್ರವರಿ - 2014 | ಸಂಚಿಕೆ ೨

**ಮುಂದಿನ ವಿಶೇಷ ಕಾರ್ಯಕ್ರಮ : ಫೆಬ್ರವರಿ 20, 21ರಂದು ಬಳ್ಪದ ತ್ರಿಶೂಲಿನೀ ದೇವಸ್ಥಾನದಲ್ಲಿ ಪರಮಪೂಜ್ಯ ಶ್ರೀ ಶ್ರೀ ಭಾರತೀತೀರ್ಥ ಸ್ವಾಮಿಗಳಿಂದ ಅನುಗ್ರಹ ಸಂದೇಶ**



## ಈ ದಿನ ಮಜ... ಕಂಡೆನು ನಿಜ...






ದೈನಂದಿನ ಜಂಜಾಟದ ಒತ್ತಡವನ್ನು ನಿವಾರಿಸಿ ಹೊಸ ಚೈತನ್ಯ ಮೂಡಿಸಲು ಹಾಗೂ ಹೊಸ ಜಾಗದ ಪರಿಚಯ ಮಾಡಲು ಶ್ರೀ ಸುಬ್ರಹ್ಮಣ್ಯ ಸಭಾದ ವತಿಯಿಂದ ತಾರೀಕು 19-1-2014ರ ರವಿವಾರ ಹನುವಾನ್ ಗುಂಡಿ, ಹೊರನಾಡು ಶ್ರೀ ಅನ್ನಪೂರ್ಣೇಶ್ವರೀ ದೇವಸ್ಥಾನಕ್ಕೆ ಕಿರು ಪ್ರವಾಸವನ್ನು ಏರ್ಪಡಿಸಲಾಗಿತ್ತು. ಬೆಳಗ್ಗೆ 6-30ಕ್ಕೆ ಒಂದು ಬಸ್ಸಿನಲ್ಲಿ ಶ್ರೀ ಸಭಾದಿಂದ ಹೊರಟಾಗ ಅದಾಗಲೇ ಶ್ರೀ ಕರುಣ್ ರಾವ್ ಬೆಳ್ಳೆಯವರು ಕಾಫಿ, ಟೀ, ತಿಂಡಿಯನ್ನು ಬಸ್ಸಿನಲ್ಲಿ ವ್ಯವಸ್ಥಿತವಾಗಿ ಜೋಡಿಸಿಟ್ಟಿದ್ದರು. ಪಡುಬಿದ್ರಿ ಶ್ರೀ ಪಾರ್ವತಿ ಬಾಲಗಣಪತಿ ದೇವಸ್ಥಾನದವರೆಗೆ ಬಸ್ಸಿನಲ್ಲಿ ಉಭಯ ಕುಶಲೋಪರಿ, ದಾರಿಯುಲ್ಲಿ ಹಲವು ಬಾಂಧವರ ಸೇರ್ಪಡೆಯೊಂದಿಗೆ ತಲುಪಿದಾಗ, ಸರಸರನೆ ಇಳಿದ ಯುವಕರು ಮೇಜಿನ ಮೇಲೆ ತಯಾರಿಸಿದ ಮೂಡೆ, ಶೀರಾ, ಕಾಫಿ, ಟೀ, ನೀರನ್ನು ಜೋಡಿಸುವ ಕೆಲಸ ಶುರುವಿಟ್ಟುಕೊಂಡರು. ಉಳಿದವರು ದೇವಸ್ಥಾನ ದರ್ಶನ ಮಾಡಿ ಬಂದು ಉಪಾಹಾರ ಸ್ವೀಕರಿಸಿದರು. ದೇವಸ್ಥಾನದ ಅರ್ಚಕರಾದ ಶ್ರೀ ಜಗದಾಭಿರಾಮ ಪೂಜೆ ಸಲ್ಲಿಸಿ, ಪ್ರಸಾದ ನೀಡಿ ನಮ್ಮನ್ನು ಉಪಚರಿಸಿದರು. ಹೊಟ್ಟೆ ಭರ್ತಿಯಾದೊಡನೆ ಖಾಲಿ ಪಾತ್ರೆಗಳು ಬಸ್ಸಿನ ತಳ ಸೇರಿದವು. ಉತ್ಸಾಹ ತುಂಬಿಕೊಂಡ ಸದಸ್ಯರಿಗೆ ಸಮಯ ಕಳೆಯುವ ಕಾರ್ಯಕ್ರಮ ಪ್ರಾರಂಭಿಸಿದ ಶ್ರೀ ಶ್ರೀಕಾಂತ್ ರಾವ್‌ರವರು ಬಸ್ಸಿನ ಧ್ವನಿವರ್ಧಕವನ್ನು ಹಸ್ತಾಂತರಿಸಿದಾಗ ದೇವರ ಭಜನೆ ಮೂಲಕ ಕಾರ್ಯಕ್ರಮ ಪ್ರಾರಂಭವಾಯಿತು. ಬಸ್ಸಿನಲ್ಲಿರುವ ಪ್ರತಿಯೋರ್ವರು ಸ್ವಪರಿಚಯದೊಂದಿಗೆ ತಮ್ಮ ಪ್ರತಿಭೆ ಪ್ರಸ್ತುತಪಡಿಸಿದಾಗ, ಹಾಸ್ಯ ಪ್ರಸಂಗಗಳು, ಸ್ವರಚಿತ ಕವನಗಳು, ವೈದ್ಯಕೀಯ ಸಲಹೆಗಳು, ಚಿತ್ರಗೀತೆಗಳು, ಇಂಗ್ಲಿಷ್ ಹಾಡು, ತಾಳಮದ್ದಳೆ ಪಾತ್ರಗಳು, ಯಕ್ಷಗಾನ ಹಾಡುಗಳು ಒಂದಕ್ಕಿಂತ ಒಂದು ಸದಸ್ಯರನ್ನು ಬೆರಗುಗೊಳಿಸಿದವು. ಡಾ. ಹರೀಶ್ ಜೋಷಿಯವರ ಸ್ವರಚಿತ ಕವನ "ಎಲ್ಲೆಲ್ಲಿ ನೋಡಲಿ ಎರೆಹುಳವೆ ಕಾಣುವೆ" ಚಿತ್ರಗೀತೆ ದಾಟಿಯಲ್ಲಿ ಹಾಡಿ, ತಮ್ಮ ಪರಿಸರ ರಕ್ಷಣೆಗೆ ಹೊಸ ಶೈಲಿಯ ಟಚ್ ನೀಡಿದರು. ತಮ್ಮ ಹಲವು ವಾದನಗಳೊಂದಿಗೆ ಬಂದಿದ್ದ ಶ್ರೀ ಕಾರ್ತಿಕ್ ಕುಡುಪು ಸುಶ್ರಾವ್ಯ ಹಾಡನ್ನು ಹಾಡಿದಾಗ ಚಪ್ಪಾಳೆಯ ಸುರಿಮಳೆಯೇ ಆಯಿತು. ಮಕ್ಕಳು ಜಂಟಿಯಾಗಿ ಹಿಂದಿ ಹಾಡುಗಳನ್ನು ಹಾಡಿ ಪ್ರತಿಭಾ ಪ್ರದರ್ಶನ ನೀಡಿದರು. ಇಷ್ಟೆಲ್ಲಾ ನಡೆಯುತ್ತಿರಲು ಹನುಮಾನ್ ಗುಂಡಿ ತಲುಪಿದಾಗ 'ಇಷ್ಟು ಬೇಗ' ಎಂದು ಹಲವರು ಉದ್ಗರಿಸಿದರು. ಕೇವಲ ವಾರದ ಹಿಂದೆಯಷ್ಟೇ ಮಾಹಿತಿ ಸಂಗ್ರಹಿಸಿದಾಗ ಇಲ್ಲದ ನಿರಾಶೆ ನಾವು ಎದುರಿಸಬೇಕಾಯಿತು. ಯಾವುದೇ ನಿರ್ದಿಷ್ಟ ಕಾರಣ ನೀಡದೆ ಜಲಪಾತ ವೀಕ್ಷಣೆಗೆ ನಿಷೇಧ ಹಾಕಲಾಗಿತ್ತು. ವಿಚಾರಿಸಲು ಗೇಟಿಗೆ ಅಳವಡಿಸಿದ ಬೀಗವಲ್ಲದೆ ಬೇರಾರು ಅಲ್ಲಿರಲಿಲ್ಲ. ತಕ್ಷಣ ಸಮಯ ಹೊಂದಾಣಿಸಲು 'ಲಾಕ್ಯಾ ಡ್ಯಾಂ'ನತ್ತ ಬಸ್ಸನ್ನು ತಿರುಗಿಸಲು ನಿಶ್ಚಯಿಸಿದೆವು. ಉಳಿದ ಚಾ, ಕಾಫಿಯೊಂದಿಗೆ ಪ್ರಕೃತಿಯ ಸೊಬಗಿನ ಹಿನ್ನೋಟದ ಆ ಸ್ಥಳವು ಎಲ್ಲರಿಗೂ ಮುದ ನೀಡಿತು. ಡ್ಯಾಂ ಹಿಂಬದಿಯಲ್ಲಿ ದಟ್ಟವಾಗಿ ಹರಡಿರುವ ಪರ್ವತ ಸಾಲು ನಯನ ಮನೋಹರವಾಗಿತ್ತು. ಛಾಯಾಚಿತ್ರಗಾರರು ಯಥೇಚ್ಛ ಫೋಟೋ ಕ್ಲಿಕ್ಕಿಸಿದರು. ಮುಂದೆ ಬಸ್ಸಿನಲ್ಲಿ ಕಾರ್ಯಕ್ರಮ ಮುಂದುವರಿದು ಅಂತಾಕ್ಷರಿ ಆರಂಭವಾಯಿತು. ಹಾಡು ಗೊತ್ತಿರುವವರು ಒಂದು ಪೂರ್ತಿ ಹಾಡು ಹಾಡಿ ಮನರಂಜಿಸಿದರೆ, ಒಂದೇ ಗೆರೆ ಗೊತ್ತಿರುವವರು ನನನ ನಾನಾ... ಎಂದು ಹಾಡಿ ನಗೆಯುಕ್ಕಿಸಿದರು. ಪ್ರವಾಸದ ಕಾರ್ಯಕ್ರಮಕ್ಕೆ ಕಳಸದ ಕಳಸೇಶ್ವರ ದೇವಸ್ಥಾನದ ಸಂದರ್ಶನವೂ ಸೇರಿತು. ಪ್ರಕೃತಿಮಡಿಲಲ್ಲಿರುವ ಈ ಗುಡಿಯು ಅನ್ನದಾನದ ಅಕ್ಕಿ ಸೇವೆಯಿಂದ ಪ್ರಖ್ಯಾತಗೊಂಡಿದೆ. ಪುರೋಹಿತರು ನಮ್ಮನ್ನು ವಿಚಾರಿಸಿ ಅನ್ನಪ್ರಸಾದ ಸ್ವೀಕರಿಸುವಂತೆ ನುಡಿದಾಗ ನಮ್ಮ ಮುಂದಿನ ಕಾರ್ಯಕ್ರಮದ ಬಗ್ಗೆ ತಿಳಿಸಿ ಹೊರನಾಡಿನತ್ತ ಪ್ರಯಾಣ ಬೆಳೆಸಿದೆವು. ಸುಮಾರು 8 ಕಿ.ಮೀ.ನಷ್ಟು ಪ್ರಯಾಣವು ಇಕ್ಕಟ್ಟಿನಿಂದ ಕೂಡಿದ ತಿರುವುಗಳನ್ನು ಹೊಂದಿದ್ದು, ಹಲವು ಸಮಯಗಳ ಕಾಲ ಕೇವಲ ಮಿನಿ ಬಸ್ಸ್ ಸಂಚರಿಸಲು ಮಾತ್ರ ಅರ್ಹವಾಗಿತ್ತು. ದೇವಸ್ಥಾನವು ಮಧ್ಯಾಹ್ನದ ವಿರಾಮವಿಲ್ಲದೆ ದರ್ಶನ ಭಾಗ್ಯವನ್ನು ಹೊಂದಿದ್ದು ಅನ್ನಪ್ರಸಾದವು ಮಧ್ಯಾಹ್ನ 2-00 ಗಂಟೆಗೆ ನಿಲ್ಲಿಸುವ ಸೂಚನೆ ನಮಗೆ ದೊರೆತ ಕಾರಣ ತಲುಪಿದಾಕ್ಷಣ ಶ್ರೀ ಅನ್ನಪೂರ್ಣೇಶ್ವರಿಯ ಅನ್ನಪ್ರಸಾದದ ಭೋಜನಾಲಯಕ್ಕೆ ನಮ್ಮ ತಂಡ ಲಗ್ಗೆಯಿಟ್ಟಿತು. ತೆರಳಿದ ಎಲ್ಲಾ ಸದಸ್ಯರು ಒಟ್ಟಾಗಿ ಕುಳಿತು ಪ್ರಸಾದ ಸ್ವೀಕರಿಸಿದೆವು. ಭಕ್ಷ್ಯ, ಪಾಯಸ ಬಂದಾಗ ಶ್ರೀ ಕಾರ್ತಿಕ ಕುಡುಪು ದೇವರ ಸ್ತುತಿಯ ಚೂರ್ಣಿಕೆ ಉಚ್ಚರಿಸಿ ಮುಗಿಸಿದಾಗ "ಹರ ಹರ ಮಹದೇವ" ತಾರಕ ಸ್ವರದಲ್ಲಿ ಮೊಳಗಿತು. ಪುರೋಹಿತ ವರ್ಗದವರು ಬಂದು ಪ್ರಸಾದ ಚೆಲ್ಲದೆ ಸಹಕರಿಸಲು ವಿನಂತಿಸಿ ಉಪಚಾರ ಮಾಡಿದರು. ಮತ್ತೆ ದೇವಸ್ಥಾನಕ್ಕೆ ಬಂದಾಗ ವಿಜೃಂಭಣೆಯ ಮಹಾ ಆರತಿಯನ್ನು ನೋಡುವ ಸೌಭಾಗ್ಯ ದೊರೆಯಿತು. ಮುಂದೆ ಸರತಿ ಸಾಲಿನಲ್ಲಿ ದೇವರ ದರ್ಶನ ಮಾಡಿ ಸೇವೆ ಪ್ರಸಾದ ಪಡೆದು ಹೊರಬರಲು ಪ್ರಯತ್ನಿಸುತ್ತಿದ್ದಾಗ, ದೇವಸ್ಥಾನದ ಸೇವೆಯಲ್ಲಿರುವ ನಮ್ಮ ಸಮಾಜದ ಶ್ರೀಮತಿ ಸರೋಜರವರು ಮಹಿಳೆಯರಿಗೆ ಆಸಕ್ತಿ ಮೂಡಿಸುವ ವಿಷಯದ ಬಗ್ಗೆ ಪ್ರಸ್ತಾಪಿಸಿದರು. ಅಲ್ಲಿ ದೇವರಿಗೆ ಬಂದಂತಹ ಸೀರೆಗಳನ್ನು ಪ್ರಸಾದ ರೂಪವಾಗಿ ರಿಯಾಯಿತಿ ದರದಲ್ಲಿ ನೀಡುವ ವ್ಯವಸ್ಥೆ ಇದೆ. ಸರಿ, ವಿಷಯ ತಿಳಿದ ಮಹಿಳೆಯರು ಒಬ್ಬೊಬ್ಬರಾಗಿ ಸೀರೆಯ ಉಗ್ರಾಣಕ್ಕೆ ಧಾವಿಸಿ ಖರೀದಿಗೆ ತೊಡಗಿದರು. ಮಕ್ಕಳು ಸಿಹಿತಿಂಡಿ, ಪಾನೀಯ ಕುಡಿಯುತ್ತಾ ದೇವಸ್ಥಾನದಲ್ಲಿ ಸುತ್ತಾಡಿದರೆ ಉಳಿದವರು ಕಷಾಯ ಪುಡಿ, ಬ್ಯಾಗ್, ತಮ್ಮ ಪ್ರೀತಿಪಾತ್ರರಿಗೆ ನೆನಪಿನ ಕಾಣಿಕೆ ಖರೀದಿಗೆ ತೊಡಗಿದರು. ಸರಿಯಾಗಿ 4-00 ಗಂಟೆಗೆ ಕಾಫಿ, ಚಾ, ಸದನದ ಪಾತ್ರೆಯಲ್ಲಿ ತುಂಬಿಸಿಕೊಂಡು ಮತ್ತೆ ಮಂಗಳೂರಿನತ್ತ ಪಯಣ ಬೆಳೆಸಿದೆವು. ಶ್ರೀ ಸೋಮಶೇಖರ್‌ರವರು, ಧ್ವನಿವರ್ಧಕದಲ್ಲಿ ಹೌಸಿ, ಹೌಸಿ, ಆಟದ ನಿಯಮಗಳನ್ನು ಘೋಷಿಸಿ ಎಲ್ಲರಿಗೂ ಟಿಕೇಟ್ ನೀಡಿದರು. ಹಿರಿಯರು, ಕಿರಿಯರು ಉತ್ಸಾಹದಿಂದ ಪಾಲ್ಗೊಂಡ ಈ ಆಟವು ಬಹುಮಾನ ವಿತರಣೆ ಮುಗಿದಾಗ "ಲಾಕ್ಯಾ ಡ್ಯಾಂನ ಇನ್ನೊಂದು ಪಾರ್ಶ್ವದಲ್ಲಿ ನಮ್ಮ ಬಸ್ಸ್ ನಿಂತಿತ್ತು". ವೀವ್ ಪಾಯಿಂಟ್‌ನಲ್ಲಿ ಚಾ, ಕಾಫಿ, ಚಟ್ಟಂಬಡೆ, ಶ್ಯಾವಿಗೆ ತಿಂದು ಫೋಟೊ ಕ್ಲಿಕ್ಕಿಸಿ ಪ್ರಯಾಣ ಮುಂದುವರಿಸಿದೆವು. ಮುಂದೆ ಬಸ್ಸಿನಲ್ಲೆ ನೃತ್ಯ ಕಾರ್ಯಕ್ರಮ ಆರಂಭವಾಯಿತು. ಸದನದ ಅಶ್ವಿನ್, ರಜತ್, ಕಾರ್ತಿಕ್‌ರೊಡನೆ ಇತರ ಯುವತಿ, ಯುವಕರು, ಮಹಿಳೆಯರು ಸಿ.ಡಿ.ಯ ಹಾಡಿಗೆ ಓಲಾಡುತ್ತಾ ನರ್ತಿಸಿದರು.

ಶ್ರೀ ನಾಗರಾಜ್ ಶರ್ಮಾ ಶುಲ್ಕ ಸಂಗ್ರಹಿಸಿ ರಶೀದಿ ನೀಡಿ ಸಹಕರಿಸಿದರೆ ಮಹಿಳಾ ವೇದಿಕೆಯ ಶ್ರೀಮತಿ ಶೈಲಜಾ ಶ್ರೀಕಾಂತ್, ಶ್ರೀಮತಿ ಅರುಣಾ ಸೋಮಶೇಖರ್ ಕಾರ್ಯಕ್ರಮ ಸಂಯೋಜಿಸಿದರು. ಭಾಗವಹಿಸಿದ ಸರ್ವರೂ ಎಲ್ಲಾ ರೀತಿಯಿಂದ ಸಹಕರಿಸಿ ಯಶಸ್ವಿ ಕಿರುಪ್ರವಾಸವು ನೆನಪಿನಲ್ಲಿ ಉಳಿಯುವಂತಹ ದಿನವನ್ನಾಗಿ ಮಾಡಿದರು.

*ಫೋಟೊ ಮತ್ತು ರೇಖಾಚಿತ್ರ : ಶ್ರೀ ರಘುವೀರ್ ಪೆರ್ಡೂರು*

*ವರದಿ : ಶ್ರೀ ಪಿ. ಶ್ರೀಕಾಂತ್ ರಾವ್, ಮಂಗಳೂರು*

### ಶ್ರೀ ಸುಬ್ರಹ್ಮಣ್ಯ ಸಭಾ (ರಿ.), ಮಂಗಳೂರು

ಆತ್ಮೀಯರೇ,



ಫೆಬ್ರವರಿ 20, 21ರಂದು ಪರಮಪೂಜ್ಯ ಶ್ರೀ ಶ್ರೀ ಭಾರತೀತೀರ್ಥ ಮಹಾಸ್ವಾಮಿಗಳು ಬಳ್ಪದ ತ್ರಿಶೂಲಿನೀ ದೇವಸ್ಥಾನಕ್ಕೆ ಚಿತ್ತೈಸಲಿದ್ದು ಈ ಕಾರ್ಯಕ್ರಮಕ್ಕೆ ಭಾಗವಹಿಸಲು ಅನುಕೂಲವಾಗುವಂತೆ ವಾಹನ ವ್ಯವಸ್ಥೆಯನ್ನು ಶ್ರೀ ಸಭಾದ ವತಿಯಿಂದ ಮಾಡಲಾಗಿದ್ದು ಆಸಕ್ತಿಯುಳ್ಳವರು ದಯವಿಟ್ಟು ಸಂಪರ್ಕಿಸಿ.

**ಶ್ರೀ ಪಿ. ಶ್ರೀಕಾಂತ್ ರಾವ್ – 09343361618**
**ಶ್ರೀ ಅನಿಲ್ ರಾವ್ ಬಿ. ಎಸ್. – 09880037110**

**Please : log on to www.subramanyasabha.com for Jnanashakthi Monthly, Event Photos, Address of Sthanikas and latest Informations.**

**ಜ್ಞಾನಶಕ್ತಿ ಮಾಸ ಪತ್ರಿಕೆ**

ಪ್ರಧಾನ ಸಂಪಾದಕರು :
**ಎಂ. ಎಸ್. ರಘುನಾಥ ರಾವ್**
**ಪುತ್ತೂರು**

ಸಂಪಾದಕರು :
**ಪಿ. ಶ್ರೀಕಾಂತ ರಾವ್**
ಮೊಬೈಲ್ : 9343361618

ಸಂಪಾದಕ ಮಂಡಳಿ :
**ನಾಗರಾಜ್ ವರ್ಕಾಡಿ**
**ರಘುವೀರ್ ಪೆರ್ಡೂರು**
**ಟಿ. ಬಿ. ಮೋಹನ್ ರಾವ್**
**ಕೃಷ್ಣ ಭಟ್**

ಆರ್ಥಿಕ ಸಲಹಾ ಸಮಿತಿ :
**ಕರುಣ್ ರಾವ್ ಬೆಳ್ಳೆ**
**ಅನಿಲ್ ರಾವ್ ಬಿ. ಎಸ್.**

ಗೌರವ ಸಲಹೆಗಾರರು :
**ಚೇತನ್ ಶರ್ಮ**
**ಶ್ರೀಮತಿ ಅರುಣಾ ಸೋಮಶೇಖರ್**

ಪ್ರಕಾಶಕರು :
**ಸಿ. ಎಸ್. ರಾವ್, ಉಡುಪಿ**

# ಪಡುಬಿದ್ರಿಯ 'ಶ್ರೀ ಬಾಲಗಣಪತಿ–ಪ್ರಸನ್ನ ಪಾರ್ವತಿ ದೇವಸ್ಥಾನ'ದಲ್ಲಿ ನಡೆದ ಎಳ್ಳಮವಾಸ್ಯೆ ಜಾತ್ರೆ



ಪಡುಬಿದ್ರಿಯ 'ಶ್ರೀ ಬಾಲ ಗಣಪತಿ–ಪ್ರಸನ್ನ ಪಾರ್ವತಿ ದೇವಸ್ಥಾನ'ದಲ್ಲಿ ದಿನಾಂಕ 16–12–2013ರ ಹುಣ್ಣಿಮೆ ದಿನದಂದು ಆರಂಭವಾದ ರಂಗಪೂಜೆಯು ವರ್ಷಾವಧಿ ಉತ್ಸವದೊಂದಿಗೆ ಸಂಪನ್ನಗೊಂಡಿತು.

ದಿನಾಂಕ 1–1–2014ರ ಎಳ್ಳಮವಾಸ್ಯೆಯಂದು ಪೂರ್ವಾಹ್ನ ಶ್ರೀ ಗಣಪತಿ ದೇವರಿಗೆ ಅಥರ್ವಶೀರ್ಷಾ ಸಹಸ್ರಮೋದಕ ಗಣಯಾಗ ನಡೆದು, ಮಹಾಪೂಜೆಯ ಬಳಿಕ ಸಾರ್ವಜನಿಕ ಅನ್ನಸಂತರ್ಪಣೆ ನಡೆಯಿತು. ಪೂರ್ವಾಹ್ನ ಘಂಟೆ 10–00ರಿಂದ 11–30ರ ವರೆಗೆ ಪಡುಬಿದ್ರಿಯ ನವಶಕ್ತಿ ಮಹಿಳಾ ಮಂಡಳಿಯ ಸದಸ್ಯೆಯರಿಂದ ಭಜನಾ ಕಾರ್ಯಕ್ರಮ ನಡೆಯಿತು. ಸಂಜೆ ಘಂಟೆ 6–00ರಿಂದ 7–30ರವರೆಗೆ ಪಡುಬಿದ್ರಿಯ ಸ್ಥಾನಿಕ ಬ್ರಾಹ್ಮಣ ಸಭಾದ ಮಹಿಳಾ ವೇದಿಕೆಯವರು ಭಜನಾ ಕಾರ್ಯಕ್ರಮ ನಡೆಸಿಕೊಟ್ಟರು. ಕ್ಷೇತ್ರದ ತಂತ್ರಿಗಳಾದ ಬ್ರಹ್ಮಶ್ರೀ ಪಾವಂಜೆ ವಾಗೀಶ ಶಾಸ್ತ್ರಿಗಳ ನೇತೃತ್ವದಲ್ಲಿ ಶ್ರೀದೇವರಿಗೆ ಮಹಾರಂಗಪೂಜೆ ಹಾಗೂ ಉತ್ಸವ ಬಲಿಗಳು ನಡೆದವು. ಬಳಿಕ ನೂತನವಾಗಿ ನಿರ್ಮಿಸಿದ ವಸಂತ ಮಂಟಪ ಹಾಗೂ ಉಯ್ಯಾಲೆಯಲ್ಲಿ ಶ್ರೀದೇವರ ಪೂಜೆಗಳು ನಡೆದು ಕೊನೆಗೆ ಮಂತ್ರಾಕ್ಷತೆಯೊಂದಿಗೆ ಕಾರ್ಯಕ್ರಮವು ಸಂಪನ್ನಗೊಂಡಿತು. ಈ ಎಲ್ಲಾ ಕಾರ್ಯಗಳಲ್ಲಿ ನಮ್ಮ ಸಮಾಜ ಬಾಂಧವರು ನೂರಾರು ಸಂಖ್ಯೆಯಲ್ಲಿ ಪಾಲ್ಗೊಂಡಿದ್ದರು. ಮಧ್ಯಾಹ್ನ ಸುಮಾರು ಸಾವಿರಕ್ಕೂ ಮಿಕ್ಕಿ ಭಕ್ತಾದಿಗಳು ಶ್ರೀದೇವರ ಅನ್ನಪ್ರಸಾದವನ್ನು ಸ್ವೀಕರಿಸಿ ಕೃತಾರ್ಥರಾದರು.

*ವರದಿಗಾರರು : **ಶ್ರೀಮತಿ ಸೀತಾದೇವಿ ಭಾಸ್ಕರ ರಾವ್,** ಪಡುಬಿದ್ರಿ.*




ಕಿಲುಬು ಕಟ್ಟಿದ ಪಾತ್ರೆಯ ಹನಿನೀರು
ರಾತ್ರಿಯಿಡಿ ತಲೆಮೇಲೆ ಬಿದ್ದು
ಒದ್ದೆಯಾಗಿದೆ ಮೈಯೆಲ್ಲ ಜಡ
ಗೆದ್ದಲು ಹಿಡಿದು ತೂತಾದ ಬಾಗಿಲ ಬಿರುಕಿಂದ
ಬರುವ ಬೆಳಕಿನ ಕಿರಣಕ್ಕೆ
ಪಾಚಿಗಟ್ಟಿದ ಮೈಬಿಸಿಯಾಗಿಸುವ ನನ್ನಾಸೆ

ಕತ್ತಲು ಹೆಪ್ಪುಗಟ್ಟಿದೆ ನನ್ನ ಬಂಧೀಖಾನೆ
ಬಾಗಿಲು ಕಿರುಗುಟ್ಟುತಿದೆ ನನ್ನಳುವಿನಂತೆ

ನೀಬಂದೆ ಚಿತ್ರಹಿಂಸೆಯ ನೀಡೆ
ಓ ಕೇಳಲಾರೆ ಕರ್ಕಶ ಘಂಟೆ ಜಾಗಂಟೆ
ತಾಳ ತಮ್ಮಟೆ ನನಗೇನು ಕಿವುಡೆ?

ಅಭಿಷೇಕಿಸಿದ ಹಾಲ್ಮೊಸರು ಕಾಲಬಳಿ ನಾರುತಿದೆ
ಕೆಟ್ಟ ವಾಸನೆ ಅಯ್ಯೋ ತಾಳಲಾರೆ

ಆರತಿಯ ಉರಿಯನ್ನು ಮುಖದ ಬಳಿ ತರುತಿರುವೆ
ಸುಟ್ಟು ಬಿಡುವೆಯಾ ನನ್ನ ಕಣ್ಣು ಮೂಗನ್ನು?
ಮೈಮೇಲೆ ಎಸೆಯುತಿಹ ಹೂವು ಎಲೆಗಳ ನೋಡು
ಎಷ್ಟೊಂದು ಇರುವೆ ಹುಳಹರಿದಾಡುತಿಹುದು

ತಟ್ಟೆಗೆಸೆಯುವ ಜನರ ನಾಲ್ಕು ಕಾಸಾಸೆಗೆ
ನನಗೆ ನೀನೇನೆಲ್ಲ ಹಿಂಸೆ ಕೊಡುತಿರುವೆ?

ನಿನ್ನ ಪೂಜೆಯ ಹಿಂಸೆ ಅನುಭವಿಸಿ ಸಾಕಾಯ್ತು
ಹೋಗಬಾರದೆ ಪೂಜಾರಿ ನೀನು ಹೊರಗೆ?
ಮುಚ್ಚು ಬಾಗಿಲ ಜಡಿಬೀಗ ಗರ್ಭಗುಡಿಗೆ
ಇಲಿಯೋ, ಇರುವೆಯೋ, ಚಳಿಯೋ, ವಾಸನೆಯೋ

ಎಲ್ಲವನು ಸಹಿಸುವೆನು,
ನಿಮ್ಮ ಭಕ್ತಿಯ ಕಾಟ ಸಹಿಸಲಾರೆ.

**– ಶ್ರೀಮತಿ ರಾಜೇಶ್ವರಿ ಕುಮಾರ ರಾವ್**
ಬೆಂಗಳೂರು

## ಹಬ್ಬಗಳ ದೇಶ ಭಾರತ

ಭಾರತದಲ್ಲಿವೆ ಬಗೆಬಗೆ ಹಬ್ಬವು
ಹಬ್ಬದ ದೇಶವಿದೆನ್ನುವರು
ಬಡವರೆ ಆದರು ಬಲ್ಲಿದರಾದರು
ಹಬ್ಬದಿ ಸಂಭ್ರಮ ಕಾಣುವರು ॥

ಜನವರಿ ತಿಂಗಳು ಬಂತೆಂದರೆ ಸರಿ
ವರ್ಷಾರಂಭದ ಶುಭದಿನವು
ತಿಂಗಳು ಉರುಳಿ ಡಿಸೆಂಬರ್ ಬಂದರೆ
ಕ್ರಿಸ್ಮಸ್ ಹಬ್ಬದ ಸಂಭ್ರಮವು ॥

ಜನವರಿ ತಿಂಗಳ ಇಪ್ಪತ್ತಾರಕೆ
ಪ್ರಜಾಪ್ರಭುತ್ವದ ಜನ್ಮದಿನ
ಆಗಸ್ಟೆಂದರೆ ದೇಶದ ಜನತೆಗೆ
ಸ್ವಾತಂತ್ರ್ಯೋತ್ಸವ ಪರ್ವದಿನ ॥

ಚಾಚಾ ನೆಹರು ಜನಿಸಿದ ದಿನವದು
ಮಕ್ಕಳ ದಿನವೆಂದಾಚರಣೆ
ರಾಧಾಕೃಷ್ಣರು ಜನಿಸಿದ ದಿನದಲಿ
ಶಿಕ್ಷಕ ದಿನವೆಂದಾಚರಣೆ ॥

ಗಣೇಶ ಚೌತಿಯೊ ದಸರಾ ಹಬ್ಬವೊ
ಬಂದೇ ಬರುವುದು ಪ್ರತಿವರುಷ
ಎಲ್ಲರು ಸೇರುತ ಹಬ್ಬಾಚರಿಸಲು
ಬಾಳಲಿ ತುಂಬುವುದುಲ್ಲಾಸ ॥


***– ರಾಂ ಎಲ್ಲಂಗಳ,*** ವಾಮಂಜೂರು

॥ ಶ್ರೀ ಗುರುಭ್ಯೋ ನಮಃ ॥

ಶ್ರುತಿಸ್ಮೃತಿಪುರಾಣಾನಾಂ ಆಲಯಂ ಕರುಣಾಲಯಮ್ । ನಮಾಮಿ ಭಗವತ್ಪಾದಂ ಶಂಕರಂ ಲೋಕಶಂಕರಮ್ ॥

**ಜೀರ್ಣೋದ್ಧಾರ ಸಮಿತಿ, ಶ್ರೀ ತ್ರಿಶೂಲಿನೀ ದೇವಸ್ಥಾನ, ಬಳ್ಪ**
**ಮತ್ತು**
**ಜಗದ್ಗುರು ಶಂಕರಾಚಾರ್ಯ**
**ಶ್ರೀ ಶ್ರೀ ಭಾರತೀತೀರ್ಥ ಮಹಾಸ್ವಾಮಿಗಳ ಸ್ವಾಗತ ಸಮಿತಿ, ಬಳ್ಪ**

ಆಸ್ತಿಕ ಭಕ್ತ ಮಹಾಜನರೇ,



**ಶ್ರೀ ಮತ್ಪರಮಹಂಸೇತ್ಯಾದಿ ಸಮಸ್ತ ಬಿರುದಾವಳೀ ವಿರಾಜಮಾನರಾದ ದಕ್ಷಿಣಾಮ್ನಾಯ ಶೃಂಗೇರಿ ಶ್ರೀ ಶಾರದಾಪೀಠಾಧೀಶ್ವರರಾದ ಪರಮಪೂಜ್ಯ ಜಗದ್ಗುರು ಶಂಕರಾಚಾರ್ಯ ಶ್ರೀ ಶ್ರೀ ಭಾರತೀತೀರ್ಥ ಮಹಾಸ್ವಾಮಿಗಳವರು**
ಸ್ವಸ್ತಿ ಶ್ರೀ ವಿಜಯನಾಮ ಸಂವತ್ಸರದ ಕುಂಭ ಮಾಸ ೮ ಸಲುವ,
**ದಿನಾಂಕ 20–02–2014, ಗುರುವಾರ ಸಂಜೆ**
ಶಿಷ್ಯ ಜನರ ಪ್ರಾರ್ಥನೆಯನ್ನಂಗೀಕರಿಸಿ, ಬಳ್ಪ ಗ್ರಾಮಕ್ಕೆ ಚಿತ್ತೈಸಿ
**ಶ್ರೀ ಭಾರತೀತೀರ್ಥ ಸಭಾಭವನವನ್ನು ಉದ್ಘಾಟಿಸಿ**
ರಾತ್ರಿ ಶ್ರೀ **ಶಾರದಾ ಚಂದ್ರಮೌಳೀಶ್ವರ ಪೂಜೆ**ಯನ್ನು ಹಾಗೂ ತಮ್ಮ ದಿವ್ಯಕರಕಮಲಗಳಿಂದ
ಶ್ರೀ **ದುರ್ಗಾಪರಮೇಶ್ವರೀ ದೇವಿಯ ಅರ್ಚನೆ**ಯನ್ನು ನೆರವೇರಿಸುವರು.
**ದಿನಾಂಕ 21–02–2014, ಶುಕ್ರವಾರ**
ನೆರೆದ ಭಕ್ತಜನರಿಗೆ ತಮ್ಮ ಅನುಗ್ರಹ ಸಂದೇಶವನ್ನು ನೀಡಲಿರುವರು.

ಭಕ್ತಮಹನೀಯರೆಲ್ಲರೂ ಕುಟುಂಬಸಮೇತರಾಗಿ ಈ ಕಾರ್ಯಕ್ರಮದಲ್ಲಿ ಭಾಗವಹಿಸಿ, ಶ್ರೀ ಶಾರದಾಚಂದ್ರಮೌಳೀಶ್ವರರ ಹಾಗೂ ಶ್ರೀ ಶ್ರೀ ಜಗದ್ಗುರು ಮಹಾಸ್ವಾಮಿಗಳವರ ಅನುಗ್ರಹಕ್ಕೆ ಪಾತ್ರರಾಗಬೇಕಾಗಿ ವಿನಂತಿ.

**ಅಧ್ಯಕ್ಷರು** ಮತ್ತು **ಸರ್ವ ಸದಸ್ಯರು**
**ಜೀರ್ಣೋದ್ಧಾರ ಸಮಿತಿ** ಮತ್ತು
**ಜಗದ್ಗುರು ಶಂಕರಾಚಾರ್ಯ ಶ್ರೀ ಶ್ರೀ ಭಾರತೀತೀರ್ಥ ಮಹಾಸ್ವಾಮಿಗಳ ಸ್ವಾಗತ ಸಮಿತಿ, ಬಳ್ಪ**

## ಅಲ್ಲಿದೆ ನಮ್ಮನೆ... ಇಲ್ಲಿರುವುದು ಸುಮ್ಮನೆ...

ಮಂಗಳೂರು ಕುಲಶೇಖರದಲ್ಲಿ ವಾಸವಾಗಿರುವ ಎಲ್ಲೂರು ಶ್ರೀ ಜನಾರ್ಧನ ರಾವ್ ಇವರ ಧರ್ಮಪತ್ನಿ ಶ್ರೀಮತಿ ಶಾಂತಾ ರಾವ್ ಇವರು ದಿನಾಂಕ 21/01/2014 ರಂದು ನಿಧನರಾಗಿರುವರು. ಮೃತಕಾಲಕ್ಕೆ ಸುಮಾರು 67 ವರ್ಷ ಪ್ರಾಯವಾಗಿದ್ದು, ಪತಿ, ಪುತ್ರಿಯರು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ.



## ಭಾವಪೂರ್ಣ ಶ್ರದ್ಧಾಂಜಲಿ

### ಶ್ರೀಮತಿ ರತ್ನಾವತಿ
### – ಒಂದು ಮೌನಗಾಥೆ

ಶ್ರೀಮತಿ ರತ್ನಾವತಿಯವರು ದಿನಾಂಕ 24-1-2014ರಂದು ವಿಧಿವಶರಾದರು. ದಿ। ಬೊಕ್ಕಸ ಮರಿಯಪ್ಪಯ್ಯನವರ ಸೊಸೆಯಾಗಿ ಕೀರ್ತಿಶೇಷ ಬಿ. ಎಂ. ಸುಬ್ರಹ್ಮಣ್ಯ ರಾವ್ ಅವರ ಪತ್ನಿಯಾಗಿ ಮನೆತುಂಬಿದ ಶ್ರೀಮತಿ ರತ್ನಾವತಿಯವರು ಕೇದಿಗೆ ಆನಂದ ರಾವ್ ಮತ್ತು ಶೇಷಮ್ಮ ದಂಪತಿಯವರ ಮೂರನೆಯ ಪುತ್ರಿ. ಪತಿಯ ನಿಧನದ ಅನಂತರ ಇನ್ನೂ ಪ್ರಬುದ್ಧರಾಗದ ತನ್ನ ನಾಲ್ವರು ಮಕ್ಕಳನ್ನು ಸಂಸ್ಕಾರಯುತವಾಗಿ ಬೆಳೆಸಿ ಸಮಾಜದಲ್ಲಿ ಉತ್ತಮ ವ್ಯಕ್ತಿಗಳಾಗಿ ರೂಪಿಸುವಲ್ಲಿ ಸದ್ದಿಲ್ಲದೆ ಕರ್ತವ್ಯವನ್ನು ನಿರ್ವಹಿಸಿದವರು ಶ್ರೀಮತಿ ರತ್ನಾವತಿಯವರು. ಹಿರಿಯ ಪುತ್ರ ಇಂಜಿನಿಯರಿಂಗ್ ಪದವೀಧರ, ಬಿ.ಎಸ್. ಅನಿಲ್ ರಾವ್ ಅವರು ಮೆ। ವಿಶ್ರಾಮ್ ಮೋಟಾರ್ಸ್ ಇದರ ಆಡಳಿತ ನಿರ್ದೇಶಕರು, ಶ್ರೀ ಸುಬ್ರಹ್ಮಣ್ಯ ಸಭಾ, ಮಂಗಳೂರು ಇದರ ಜೊತೆ ಕಾರ್ಯದರ್ಶಿ, ಮಂಗಳೂರು ರೋಟರಿ ಕ್ಲಬ್‌ನ ಕಾರ್ಯದರ್ಶಿ– ಹೀಗೆ ಉದ್ಯಮದಲ್ಲೂ, ಸಮಾಜಸೇವೆಯಲ್ಲೂ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ತನ್ನದೇ ಛಾಪನ್ನು ಮೂಡಿಸಿದವರು. ಎರಡನೇ ಪುತ್ರ ಬಿ. ಎಸ್. ಅಶ್ವಿನ್ ರಾವ್ ಸ್ಟ್ರಕ್ಚರಲ್ ಇಂಜಿನಿಯರಿಂಗ್ ಡಿಸೈನಿಂಗ್ ಪದವೀಧರರಾಗಿದ್ದು, ಬೆಂಗಳೂರಿನ ವಿದೇಶೀ ಕಂಪೆನಿಯೊಂದರಲ್ಲಿ ಉದ್ಯೋಗದಲ್ಲಿದ್ದಾರೆ. ಪುತ್ರಿ ಅನುಪಮ ಇವರು ಕರ್ನಾಟಕ ಬ್ಯಾಂಕಿನ ಅಧಿಕಾರಿಯಾಗಿದ್ದು, ಇನ್ನೋರ್ವ ಮಗಳು ಅಂಜನಾ ಸಾರ್ಥಕ ಗೃಹಿಣಿಯಾಗಿದ್ದಾರೆ.

ತನ್ನ ಪತಿಯ ನಿಧನದ ಅನಂತರ ತನ್ನ ಮಕ್ಕಳಿಗೆ ತಂದೆ ಹಾಗೂ ತಾಯಿಯ ಎರಡೂ ಜವಾಬ್ದಾರಿಗಳನ್ನು ಅತ್ಯಂತ ಸಮರ್ಥವಾಗಿ ಶ್ರದ್ಧೆಯಿಂದ ನಿರ್ವಹಿಸಿದ ಶ್ರೀಮತಿ ರತ್ನಾವತಿಯವರ ಬದುಕು **ಒಂದು ಮೌನಗಾಥೆ**. ಅವರ ಕುಟುಂಬದ ಎಲ್ಲಾ ಸದಸ್ಯರ, ಅಭಿಮಾನಿಗಳ ಪರವಾಗಿ **'ಜ್ಞಾನಶಕ್ತಿ ಬಳಗ'**ವು ಶ್ರದ್ಧಾಂಜಲಿಯನ್ನು ಅರ್ಪಿಸುತ್ತದೆ.

## ಭಾವಪೂರ್ಣ ಶ್ರದ್ಧಾಂಜಲಿ



ಬೆಂಗಳೂರಿನಲ್ಲಿ ವಾಸವಾಗಿದ್ದ **ಪಡುಬಿದ್ರಿ ಸದಾಶಿವ ರಾವ್**ರವರು 24/01/2014ರಂದು ತಮ್ಮ ಸ್ವಗೃಹದಲ್ಲಿ ನಿಧನರಾದರು. ಮೃತಕಾಲಕ್ಕೆ ಅವರಿಗೆ 93 ವರ್ಷ ಪ್ರಾಯವಾಗಿದ್ದು ಓರ್ವ ಪುತ್ರ ಡಾಕ್ಟರ್ ವೆಂಕಟೇಶ ರಾವ್ ಹಾಗೂ ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ. ಇವರು ಹಲವು ಸಂಘ-ಸಂಸ್ಥೆಗಳಿಗೆ ತಮ್ಮ ದೇಣಿಗೆ ನೀಡಿದ್ದು ನಮ್ಮ ಶ್ರೀ ಸುಬ್ರಹ್ಮಣ್ಯ ಸಭಾಕ್ಕೂ ತಮ್ಮ ಪತ್ನಿ ಶಾಂಭವೀದೇವಿಯವರ ಹೆಸರಿನಲ್ಲಿ ವಿದ್ಯಾನಿಧಿಯನ್ನು ಸ್ಥಾಪಿಸಿ ಇದರ ಮೂಲಕ ರೂ. 5 ಲಕ್ಷಕ್ಕೂ ಮೇಲಿನ ದೇಣಿಗೆಯನ್ನು ನೀಡಿದ್ದಾರೆ. ಇವರು ಸಮಾಜದ ಹಿರಿಯ ಚೇತನ. ಉತ್ತಮ ಜನಾನುರಾಗಿಯಾಗಿದ್ದು ಇವರಿಗೆ ಶ್ರೀ ಸುಬ್ರಹ್ಮಣ್ಯ ಸಭಾವು ಭಾವಪೂರ್ಣ ಶ್ರದ್ಧಾಂಜಲಿ ಅರ್ಪಿಸುತ್ತದೆ.

**ಶ್ರೀ ಸುಬ್ರಹ್ಮಣ್ಯ ಸಭಾ (ರಿ.)**
**ಅಧ್ಯಕ್ಷರು** ಮತ್ತು **ಸರ್ವ ಸದಸ್ಯರು,** ಮಂಗಳೂರು

## ಭಾವಪೂರ್ಣ ಶ್ರದ್ಧಾಂಜಲಿ



ಜನನ : 01/04/1947
ಮರಣ : 12/12/2013

ಸಿಂಡಿಕೇಟ್ ಬ್ಯಾಂಕಿನಲ್ಲಿ ಉದ್ಯೋಗದಲ್ಲಿದ್ದ ಮಂಗಳೂರು ಲಾಲ್‌ಬಾಗ್‌ನಲ್ಲಿ ವಾಸವಾಗಿದ್ದ **ಯು. ನವೀನ್ ಕುಮಾರ್**ರವರು ತಾರೀಕು 12–12–2013ರಂದು ನಿಧನರಾದರು. ಅವರ ದಿವ್ಯಾತ್ಮಕ್ಕೆ ಭಕ್ತಿಯ ಪ್ರಣಾಮಗಳನ್ನು ಸಲ್ಲಿಸುತ್ತಿರುವ–

**ಯು. ಕುಸುಮ ನವೀನ್ ಕುಮಾರ್** (ಪತ್ನಿ)
**ಮಕ್ಕಳು** ಮತ್ತು **ಅಳಿಯಂದಿರು**
**ರೇಶ್ಮಾ** ಮತ್ತು **ವಸಂತ ಕುಮಾರ್,** ಉಡುಪಿ
**ಸುಷ್ಮಾ** ಮತ್ತು **ಶಿವಾನಂದ್ ರಾವ್,** ದುಬೈ

ಮೊಮ್ಮಕ್ಕಳು : **ಅನೀಶ್ ರಾವ್** ಮತ್ತು **ಅಂಜನ್ ರಾವ್**


**SHARMA ENTERPRISES**
KANKANADY, MANGALORE - 575 002
Mob. : 9844187083
Prop. : *Chethan Sharma*

Sharekhan
Your guide to the financial jungle
EQUITIES | DERIVATIVES | COMMODITIES
CURRENCY | MUTUAL FUND | IPOs
PMS | DEMAT
Pradeep Rao K.
NAVADURGA FINANCIALS
Ph: 0824-2412905, 2441318 Mobile: 94481 91028

ಪತ್ರಿಕೆಗೆ ಶುಭ ಬಯಸುವ–
ಶ್ರೀಮತಿ ಕುಸುಮ ನವೀನ್ ಕುಮಾರ್
ಶ್ರೀಮತಿ ರೇಷ್ಮ, ಶ್ರೀ ವಸಂತ್ ಕುಮಾರ್, ಅನೀಶ್ ರಾವ್
ಶ್ರೀಮತಿ ಸುಶ್ಮ, ಶ್ರೀ ಶಿವಾನಂದ ರಾವ್ ಹಾಗೂ ಅಂಜನ್ ರಾವ್

*Prop. : P. Srikanth Rao* Mobile : 9343361618
**M/s. SAMARPAN**
*HOUSE OF STATIONERY*
Near Vijaya Pen Mart
Hampankatta, Mangalore - 1

**ಹೆಬ್ಬಾರ್ ಎಂಟರ್‌ಪ್ರೈಸಸ್**
ಭೂವರಾಹ ಕಾಂಪ್ಲೆಕ್ಸ್, ವಾದಿರಾಜ ರಸ್ತೆ, ಉಡುಪಿ - 576 101
*ಶುಭ ಸಮಾರಂಭಗಳಿಗೆ ಬೇಕಾಗುವ ಕ್ಯಾಟರಿಂಗ್ ವ್ಯವಸ್ಥೆ, ಶಾಮಿಯಾನ, ಗ್ಯಾಸ್‌ಸ್ಟವ್, ಟೇಬಲ್, ಕುರ್ಚಿ, ಪಾತ್ರೆಗಳು ಹಾಗೂ ಇನ್ನಿತರ ಎಲ್ಲಾ ವ್ಯವಸ್ಥೆಗಳನ್ನೂ ಸಕಾಲದಲ್ಲಿ ಒದಗಿಸಲಾಗುವುದು.*
ಫೋನ್ : 2531493 (O), 2530851 (R), ಮೊಬೈಲ್ : 9448437893

ಪತ್ರಿಕೆಗೆ ಶುಭ ಬಯಸುವ–
ಶ್ರೀ ಕಾಂತಾವರ ಜಯಪ್ರಕಾಶ್
ಮತ್ತು ಶ್ರೀಲತಾ ಹಾಗೂ
ತನ್ವಿ, ನಿವೇದ, ದೃತಿ ಮತ್ತು ದ್ರುವ್

Prop. : *Kishore Kumar Kedige*
Ph. : 2231524
M. : 9880726325
**KYADIGE AUTOMOBILES**
Opp. to D. P. Stores Main Road, B. C. Road, Bantwal Tq.
*Dealers in : 2 & 3 WHEELERS SPARES*

ಪತ್ರಿಕೆಗೆ ಶುಭ ಬಯಸುವ–
ಡಾ. ದಿವಾಕರ್ ರಾವ್ ಹಾಗೂ
ಶ್ರೀಮತಿ ಸ್ನೇಹಲತಾ ಮತ್ತು ಕುಟುಂಬ
ಸುರತ್ಕಲ್, ಮಂಗಳೂರು



## 'ನಮ್ಮ ಸಾಧಕರು'



### ಕು. ತಾನ್ಯಾ ರಾವ್ ಅಪೂರ್ವ ಕ್ರೀಡಾ ಸಾಧನೆಗಳು

**ನಂದಿಕೂರು :** ಕು. ತಾನ್ಯಾ ರಾವ್ (ಜಾಮ್‌ನಗರ ಎಸ್ಸಾರ್ ಆಯಿಲ್‌ನ ಹಿರಿಯ ಮೆನೇಜರ್) ಎಸ್. ಮಂಜುನಾಥ ರಾವ್ ಮತ್ತು ಶ್ರೀಮತಿ ರಾಜಶ್ರೀ ರಾವ್ ಅವರ ಪುತ್ರಿ, ಭಾರತದ ಕ್ರಿಕೆಟ್ ನಿಯಂತ್ರಣ ಮಂಡಳಿ (BCCI) ಸಂಘಟಿಸುವ ರಾಷ್ಟ್ರಮಟ್ಟದ 'ಸೌರಾಷ್ಟ್ರ ಕ್ರಿಕೆಟ್ ತಂಡ'ಕ್ಕೆ 19 ವರ್ಷದೊಳಗಿನ ವಿಭಾಗದಡಿ ಆಯ್ಕೆಯಾಗಿದ್ದಾಳೆ. ಇದೇ ವಯೋಮಾನದಡಿ ಈ ಹಿಂದಿನ ಎರಡು ವರ್ಷಗಳಲ್ಲೂ ಗುಜರಾತ್ ಕ್ರಿಕೆಟ್ ತಂಡಕ್ಕೆ ಆಯ್ಕೆಯಾಗಿರುವ ಇವಳು ರಾಜ್ಯಮಟ್ಟದ ಫುಟ್‌ಬಾಲ್ ಸ್ಪರ್ಧೆಗೂ ಆಯ್ಕೆಯಾಗಿದ್ದು, ಈಕೆ ಭಾಗವಹಿಸಿದ ಜಿಲ್ಲಾ ಮಟ್ಟದ ಪಂದ್ಯಾಟವು ಜಯಗಳಿಸಿತ್ತು.

ಕಲಿಯುವಿಕೆಯಲ್ಲೂ ಮುಂಚೂಣಿಯಲ್ಲಿರುವ ಈಕೆ ಭರತನಾಟ್ಯದಲ್ಲಿ ಜೂನಿಯರ್ ವಿಭಾಗದಲ್ಲಿ ತೇರ್ಗಡೆಯಾಗಿದ್ದು, ಎಲ್ಲಾ ಸಹಪಠ್ಯ ಚಟುವಟಿಕೆಗಳಲ್ಲೂ ಸಕ್ರಿಯವಾಗಿ ಭಾಗವಹಿಸುತ್ತಿದ್ದಾಳೆ. ಪ್ರಸ್ತುತ ಜಾಮ್‌ನಗರದಲ್ಲಿ 8ನೇ ತರಗತಿಯಲ್ಲಿ ಕಲಿಯುತ್ತಿರುವ ಹೆಮ್ಮೆಯ ಯುವಪ್ರತಿಭೆ ಕು. ತಾನ್ಯಾ ಇವಳು ಮುಂದೆ ಇನ್ನೂ ಹೆಚ್ಚಿನ ಸಾಧನೆಗಳನ್ನು ಮಾಡಲೆಂದು **"ಜ್ಞಾನ–ಶಕ್ತಿ"** ಬಳಗದ ಹಾರೈಕೆ.

## ದೂರದ ಚೈನಾದಲ್ಲೂ ಸೈ ಎನಿಸಿಕೊಂಡ ಕಾಸರಗೋಡು ಬೊಂಬೆಯಾಟ ತಂಡ

ಚೀನಾ ದೇಶದ ಸಾಂಸ್ಕೃತಿಕ ಇಲಾಖೆ ಮತ್ತು ಮಾಹಿತಿ ಕೈಗಾರಿಕಾ ಸಚಿವಾಲಯದ ಸಂಯುಕ್ತ ಆಶ್ರಯದಲ್ಲಿ ಗುಯಿಝೋ ರಾಜ್ಯದ ಗುಯಾಂಗ್ ನಗರದಲ್ಲಿ ಜಾಗತಿಕ ಜಾನಪದ ಉತ್ಸವವನ್ನು ಆಯೋಜಿಸಲಾಗಿತ್ತು. ವಿಶ್ವದ 33 ರಾಷ್ಟ್ರಗಳ ಪ್ರಸಿದ್ಧ ಕಲಾವಿದರು ಸಮಾರಂಭದಲ್ಲಿ ಪಾಲ್ಗೊಂಡಿದ್ದರು. ಭಾರತದಿಂದ ಯಕ್ಷಗಾನ ಬೊಂಬೆಯಾಟದ ಪ್ರಧಾನ ಸೂತ್ರಧಾರಿ ಕೆ. ವಿ. ರಮೇಶ್ ಅವರಿಗೂ ಕಲಾಪ್ರದರ್ಶನ ಹಾಗೂ ಪ್ರಾತ್ಯಕ್ಷಿಕೆಗೆ ಅವಕಾಶ ಲಭಿಸಿತ್ತು. ನೆಲದ ಮೂಲಸಂಸ್ಕೃತಿಯನ್ನು ಪರಿಚಯಿಸುವ ವಿಶಿಷ್ಟ ಸಂಪ್ರದಾಯದಲ್ಲಿ ಎಲ್ಲರನ್ನೂ ಬರಮಾಡಿಕೊಳ್ಳಲಾಯಿತು. ವಿಶಾಲವಾದ ಸಭಾಂಗಣದ ವರ್ಣರಂಜಿತ ವೇದಿಕೆಯಲ್ಲಿ ಅಲ್ಲಿನ ರಾಜ್ಯಪಾಲರು ಕಾರ್ಯಕ್ರಮವನ್ನು ಔಪಚಾರಿಕವಾಗಿ ಉದ್ಘಾಟಿಸಿ ಬಳಿಕ ಕಲಾಪ್ರದರ್ಶನಗಳು ನಡೆದವು. ಇದರೊಂದಿಗೆ ಕೆ. ವಿ. ರಮೇಶ್ ಅವರ ಯಕ್ಷಗಾನ ಬೊಂಬೆ ಕುಣಿಸುವ ಪ್ರಾತ್ಯಕ್ಷಿಕೆಯು ಜನಮನ ರಂಜಿಸಿತು. ವೀಕ್ಷಿಸಿದ ಲಕ್ಷಗಟ್ಟಲೆ ಮಂದಿಗೆ ಬೊಂಬೆಗಳ ಹಾವ, ಭಾವ, ನರ್ತನ ಬೆರಗು ಮೂಡಿಸಿತು. ಭಾರತೀಯ ಕಲಾ–ಸಂಸ್ಕೃತಿಯನ್ನು ಬಿಂಬಿಸುವ ಉಡುಪು ಧರಿಸಿ ಪ್ರಾತ್ಯಕ್ಷಿಕೆ ನೀಡಿದ ಕೆ. ವಿ. ರಮೇಶ್ ಅವರೊಂದಿಗೆ ಫೋಟೊ ತೆಗೆಸಲು ಜನ ಮುಗಿಬೀಳುತ್ತಿದ್ದ ದೃಶ್ಯವು ಆ ಕಲಾಕರ್ಷಣೆಗೆ ಸಾಕ್ಷಿಯಾಯಿತು.

ಕೆ. ವಿ. ರಮೇಶ್ ಅವರು ಜಾಗತಿಕ ಬೊಂಬೆಯಾಟ ಉತ್ಸವಗಳಲ್ಲಿ ಈ ಹಿಂದೆಯೂ ಭಾಗವಹಿಸಿದ್ದರು. 1998ರಲ್ಲಿ ಪಾಕಿಸ್ಥಾನದ ಲಾಹೋರ್, 2004ರಲ್ಲಿ ಫ್ರಾನ್ಸ್‌ನ ಪ್ಯಾರೀಸ್, 2009ರಲ್ಲಿ ದುಬೈ, 2010ರಲ್ಲಿ ಯುರೋಪ್‌ನ ಜಕೋಸ್ಲೋವಾಕಿಯಾದ ಫ್ರಾಗ್‌ನಲ್ಲಿ ಏರ್ಪಡಿಸಲಾಗಿದ್ದ ಉತ್ಸವಗಳಲ್ಲಿ ಅವರು ಭಾರತವನ್ನು ಪ್ರತಿನಿಧಿಸಿದ್ದರು.

### ಕಾರ್ಕಳ ಜೋಗುಳಬೆಟ್ಟು ಶ್ರೀರಾಮಧಾಮ ಧ್ಯಾನಮಂದಿರದಲ್ಲಿ ಶ್ರೀ ದುರ್ಗಾ ತ್ರಿಕಾಲಪೂಜೆ

ದಿನಾಂಕ 21/01/2014ರಂದು ಶ್ರೀ ಗೋಪಾಲಕೃಷ್ಣ ಕೋಲ್ವೆ ಮತ್ತು ಶ್ರೀ ಭಾಸ್ಕರ ರಾವ್ ಕೋಲ್ವೆಯವರ ನೇತೃತ್ವದಲ್ಲಿ ಶ್ರೀ ದುರ್ಗಾ ತ್ರಿಕಾಲಪೂಜೆಯನ್ನು ಭಕ್ತಿ ಸಂಭ್ರಮದಿಂದ ನಡೆಸಿದರು. ಪ್ರಧಾನ ಪುರೋಹಿತರಾಗಿ ಬ್ರಹ್ಮಶ್ರೀ ವಾಗೀಶ ಶಾಸ್ತ್ರಿಯವರು ಸಹಪುರೋಹಿತರೊಂದಿಗೆ ಧಾರ್ಮಿಕ ವಿಧಿ–ವಿಧಾನಗಳನ್ನು ನೆರವೇರಿಸಿ ಶ್ರೀ ದುರ್ಗಾಪರಮೇಶ್ವರಿಯನ್ನು ಪ್ರಾರ್ಥಿಸಿ ಫಲ–ಮಂತ್ರಾಕ್ಷತೆ ಕೊಟ್ಟು ಆಶೀರ್ವದಿಸಿದರು. ಶ್ರೀರಾಮಧಾಮದ ಶ್ರೀ ಶಶಿಧರ ರಾವ್ ಕೋಲ್ವೆಯವರ ಮೇಲ್ವಿಚಾರಣೆಯಲ್ಲಿ ನಡೆದ ಈ ಕಾರ್ಯಕ್ರಮದಲ್ಲಿ ಹೆಜಮಾಡಿ ಶ್ರೀ ಕೃಷ್ಣರಾಜ ಭಟ್, ಮುಂಡ್ಕೂರು ಶ್ರೀ ಸುಬ್ರಹ್ಮಣ್ಯ ಭಟ್, ಮಠಂತಬೆಟ್ಟು ಶ್ರೀ ಪ್ರಶಾಂತ ಶರ್ಮ, ಕಿಗ್ಗ ಶ್ರೀ ನಾಗಭೂಷಣ ಶಾಸ್ತ್ರಿ, ಕಾವಳಕಟ್ಟೆ ಶ್ರೀ ಪ್ರತಾಪ ಭಟ್ ಹಾಗೂ ಸಹಾಯಕರಾಗಿ ಮಲ್ಲಮಾರ್ ಶ್ರೀ ಗಣೇಶ್ ಭಟ್ ಭಾಗವಹಿಸಿದರು.




**ಹೋಮಿಯೋಪತಿ ಹಾಗೂ ಡಯಟ್ ಸಲಹೆ ಔಷಧಿಗಳಿಗಾಗಿ ಸಂದರ್ಶಿಸಿ.**

**ಡಾ. ಸುಶೀಲ ರಾವ್,** ಬಿ.ಎಚ್.ಎಮ್.ಎಸ್.

**ಹೋಮಿಯೋಪತಿ ಕನ್ಸಲ್ಟೆಂಟ್ ಆ್ಯಂಡ್ ಡಯಟಿಶಿಯನ್**

**ಸ್ಪರ್ಶ ಮೆಡಿಕಲ್ ಸೆಂಟರ್**

**ಬೆಂದೂರ್‌ವೆಲ್ ಸರ್ಕಲ್, ಮಂಗಳೂರು - 2**

ದೂರವಾಣಿ : 0824-4276666 ಮೊಬೈಲ್ : 9844063805


## ವಿದೇಶದಿಂದ ಮರಳಿ ತಾಯ್ನಾಡಿಗೆ



ಶ್ರೀ ಪ್ರಸನ್ನ ಕುಮಾರ್ ಮತ್ತು ಶ್ರೀಮತಿ ಜಯಲಕ್ಷ್ಮೀ ಪ್ರಸನ್ನ ಕುವಟಾರ್ ಇವರುಗಳು, ಅಮೇರಿಕಾದ ಸೌತ್ ಫ್ಲೋರಿಡಾದ ತಮ್ಮ ಮಗ ಶ್ರೀ ರಾಮಪ್ರಸಾದ್ ಉಪಾಧ್ಯಾಯ, ಶ್ರೀಮತಿ ಸೌಮ್ಯ ಪ್ರಸಾದ್, ಮೊಮ್ಮಕ್ಕಳೊಂದಿಗೆ (ಶ್ರೀಯಾ, ಅಭಿನವ್) ಆರು ತಿಂಗಳ ಕಾಲ ಇದ್ದು, ಆನಂದಿಸಿ ಮರಳಿ ತಾಯ್ನಾಡಿಗೆ ಬಂದಾಗ, ಹಿರಿಯ ಮಗ ಶ್ರೀ ಮಹೇಶ ಉಪಾಧ್ಯಾಯ, ಶ್ರೀಮತಿ ಮಂಜುಳಾ ಮಹೇಶ್ ಹಾಗೂ ಮೊಮ್ಮಕ್ಕಳು (ಅಚಿಂಥ್ಯ, ಅನಘ್ಯ) ಆದರದಿಂದ ಬರಮಾಡಿಕೊಂಡರು.

## ಮದುವೆ ನಿಶ್ಚಯ

ಅಂದು ನನ್ನ ಅಣ್ಣನಿಗೆ ಮದುವೆ ನಿಶ್ಚಯ
ಏನು ಕೇಳುತೀರಿ ಅವನ ಗಡಿಬಿಡಿ ವಿಷಯ
ಕ್ರಾಪು ಬಾಚಿದನು ಕೂದಲೆಲ್ಲ ನಿಮಿರಿಸಿ
ಅಂಗಿಯಲಿ ಹಲ್ಲಿ ಹೇತ ಇತ್ತು ಅಲ್ಲಲ್ಲಿ
ಎಣ್ಣೆನೀರ ಸ್ನಾನ ಅವಗೆ ಮೋರೆಯೆಲ್ಲ ಹಸಿಹಸಿ
ಮನದ ಒಳಗೆ ಅತ್ತಿಗೆಯ ನೆನಪು ಬಿಸಿಬಿಸಿ
ಪ್ಯಾಂಟ್ ತೂರಿಸಿದನು ಜಿಪ್ಪು ಹಾಕಲು ಮರೆತ
ಪೌಡರ್ ಎಂದು ಡಿ.ಡಿ.ಟಿ.ಯ ಮೋರೆಗೆ ಬಳಿದ
ಸೆಂಟು ಬಾಟಲಿಯನು ಜೋರಾಗಿ ಸುರಿದನು
ಆಯಿತಲ್ಲ ಸೆಂಟಿನ ಮಳೆ ನಾನೂ ಕೂಡಾ ತೊಯ್ದು ಹೋದೆನು
ಬೂಟು ಹಾಕಿಕೊಂಡು ಹೊರಟ ಒಂದೇ ಕಾಲಿಗೆ
ಬಾಳೆಹಣ್ಣು ಸಿಪ್ಪೆ ಜಾರಿ ಬಿದ್ದು ಬಿಟ್ಟ ದಾರಿಗೆ
ಅತ್ತಿಗೆಯ ಮೋರೆ ನೋಡಿ ನಾಚಿ ಕುಳಿತನು
ಲಾಡು ಎಂದು ಗೋಳಿಬಜೆಯ ತುರುಕಿ ತಿಂದನು
ಕೊನೆಗೂ ಆಯಿತಲ್ಲ ಅವನ ಮದುವೆ ನಿಶ್ಚಯ
ಕರೆಯೋಲೆಯಲ್ಲಿ ಅತ್ತಿಗೆಯ ಹೆಸರೆ ಮಾಯ.

**–ವೀಣಾ ರಾವ್ ಯಂ. ಪಿ.**

D/o. ಡಿ. ಪದ್ಮನಾಭ ರಾವ್, 'ವಿನಾಯಕ ಕೃಪಾ', ಶಿವಾಜಿನಗರ, ವಿಟ್ಲ


*Sri Hari Adyapady*
*Proprietor*



Ph : 0824-2251597 (R)
2252119 (O)
Mobile : 9448344612
9964072489

**SHIVA ELECTRICALS**

**2nd Floor, Ozanam Complex**
**Church Building, Main Road**
**BAJPE, MANGALORE**



**PRAVEEN KUMAR ADYAPADY**
**ADVOCATE**

**MANGALORE OFFICE**
JANVI PLAZA, IInd FLOOR
BUNTS HOSTEL, MANGALORE

**BAJPE OFFICE**
OZANAM COMPLEX, IInd FLOOR
CHURCH BUILDING, MAIN ROAD, BAJPE

0824 - 2254478 (O) 9620392584, 9448724981(M), 2254448 (R)

**We undertakes :** Civil, Criminal, Motor Vehicles, A.C., D.C. Cases, Land Conversion, Registration etc.

ಪತ್ರಿಕೆಗೆ ಶುಭ ಬಯಸುವ–



**ಶ್ರೀ ಸೋಮಶೇಖರನ್**

**ಮತ್ತು**

**ಶ್ರೀಮತಿ ಅರುಣಾ ಸೋಮಶೇಖರನ್**

**ಚಿಲಿಂಬಿ, ಮಂಗಳೂರು**

## ಚುಟುಕುಗಳು

ಪುಸ್ತಕದ ಗಂಟು
ಹಲವು ನೆಂಟರ ನಂಟು
ಸಜ್ಜನರ ಅಂಟು
ಸ್ವರ್ಗಕ್ಕೆ ದಾರಿ ಉಂಟು


* * *

ಶಿಸ್ತಿನಿಂದಲಿ ಭಕ್ತಿಯಿಂದಲಿ ತೊಡಗಿ
ಅಲ್ಲಿಯೇ ಇರುವನು ಪರಮಾತ್ಮ ಅಡಗಿ
ಹೀನ ಕೃತ್ಯಗಳ ಮಾಡುತಲಿ ಸಿಡುಕಿ
ತೀರ್ಥಯಾತ್ರೆಯ ಮಾಡುವುದು ಯಾತಕೀ


* * *

ಗದ್ದೆಯಲ್ಲಿ ಕೆಸರಾಟ
ಕೆಸರಲ್ಲಿ ಕೊಸರಾಟ
ಸೋತರೆ ಕಿರುಚಾಟ
ಗೆದ್ದರೆ ಮೊಸರೂಟ.

*ರಚನೆ :* **ವತ್ಸಲಾ ಯೋಗೀಶ್ ರಾವ್, ಏಳಿಂಜೆ**



**ಅನಘಾ ರಾವ್,** *5ನೇ ತರಗತಿ*



**ಅನನ್ಯ ರಾವ್,** *1ನೇ ತರಗತಿ*


The RIGHT Place for the Customer

**RAJESH POWER PRESS**


PRINTERS & PUBLISHERS

**DARBE - 574 202, PUTTUR, D. K., KARNATAKA**

Phone : (08251) 231696, 231697 & 322386

E-mail : msraghunathrao@hotmail.com

ಪತ್ರಿಕೆಗೆ ಶುಭ ಬಯಸುವ–



**ಶ್ರೀ ನಾಗರಾಜ್ ಶರ್ಮ ಹಾಗೂ**
**ಶ್ರೀಮತಿ ಆರತಿ ಶರ್ಮ**
**ಪ್ರಮೋದ್ ಟವರ್ಸ್, ಮಂಗಳೂರು**

*Manish Rao U.*

Tel : (O) 2223301
Mobile : 9448726499 / 8884284939

**NAVA COMPUTER**



*Dealers in : Computers Hardware and Peripherals*
*Computer Sales & Services*

*Alvares Centre, N.H. 17, Nanthoor, Mangalore - 575 005*

ಪತ್ರಿಕೆಗೆ ಶುಭ ಬಯಸುವ–



**ಶ್ರೀ ಸೋಮಶೇಖರನ್**
ಮತ್ತು
**ಶ್ರೀಮತಿ ಅರುಣಾ ಸೋಮಶೇಖರನ್**
**ಚಿಲಿಂಬಿ, ಮಂಗಳೂರು**



**PRAMOD AUTOMOBILES**

30 Years of Service

**KARANGALPADY**
**MANGALORE- 575 003**

Ph. : 2493633 (O)
2212723 (R)
M. : 9448260225

**Wholesale & Retail Dealers in**
**2 & 3 WHEELERS SPARES & ACCESSORIES**

**Prop. : Ln. K. HARSHA KUMAR**

**ರಾಮಾ ಅಟೋಮೊಬೈಲ್ಸ್**



ಮಾರುತಿ ವಾಹನ ತಜ್ಞರು



**ಮಾಲೆಮಾರ್ ರಸ್ತೆ, ಕೊಟ್ಟಾರ ಚೌಕಿ, ಮಂಗಳೂರು - 575 006**


ಫೋನ್ : 0824 - 2454355, ಮೊಬೈಲ್ : 9448545702

**ಪ್ರೊ. : ಯು. ಸಂತೋಷ ಕುಮಾರ್, ಉಜ್ಜೋಡಿ**



## ಚಿಣ್ಣರ ಆರ್ಟ್ ಗ್ಯಾಲರಿ



**ಕೃಪಾಲ್**
*5ನೇ ತರಗತಿ*
*ಎಸ್. ಆರ್. ಪಬ್ಲಿಕ್ ಸ್ಕೂಲ್*
*ಹೆಬ್ರಿ*




**ಅನುಜ್ಞಾ**
*ಶ್ರೀದೇವಿ ನರ್ಸರಿ ಸ್ಕೂಲ್, ಕಿನ್ನಿಗೋಳಿ*



**ರಮ್ಯಶ್ರೀ**
*5ನೇ ತರಗತಿ*
*ಸೈಂಟ್ ಎನ್ಸ್ ಸ್ಕೂಲ್*
*ಕಟಪಾಡಿ*

**ಚಿತ್ರ 1**



**ಚಿತ್ರ 2**



ಜ್ಞಾನಶಕ್ತಿ **'ಚಿಣ್ಣರ ಆರ್ಟ್ ಗ್ಯಾಲರಿ'**ಗೆ 12 ವರ್ಷದ ಒಳಗಿನ ಮಕ್ಕಳು ತಾವು ರಚಿಸಿದ ರೇಖಾಚಿತ್ರ ಮತ್ತು ಪೈಂಟಿಂಗ್‌ಗಳನ್ನು ಕಳುಹಿಸಬಹುದು. ಇದರೊಂದಿಗೆ ಅವರ ಭಾವಚಿತ್ರ ಕಳುಹಿಸಿದಲ್ಲಿ ಪ್ರಕಟಿಸಲಾಗುವುದು. ಭಾವಚಿತ್ರಗಳನ್ನು ಹಿಂತಿರುಗಿಸಲಾಗುವುದಿಲ್ಲ.

**ನಮ್ಮ ವಿಳಾಸ :**
**ಅಂಚೆ ಪೆಟ್ಟಿಗೆ ನಂ. 206**
**ದರ್ಬೆ - 574 202, ಪುತ್ತೂರು, ದ. ಕ.**

**ಈ ಮೇಲಿನ ಎರಡು ಚಿತ್ರಗಳಲ್ಲಿರುವ 10 ವ್ಯತ್ಯಾಸಗಳನ್ನು ಗುರುತಿಸಿ.**

### ಕಾರ್ಕಳದಲ್ಲೊಂದು ಅಪೂರ್ವ ಮಾನವ–ಪಕ್ಷಿ ಸ್ನೇಹ

# ನಿವೃತ್ತ ಶಿಕ್ಷಕಿ ಹೆಗಲೇರಿ ಕಾಗೆ ಸವಾರಿ!



ಕಾಗೆ ಎಂದರೆ ಅನಿಷ್ಟ, ಅಪಶಕುನ ಎಂಬ ಮೂಢನಂಬಿಕೆ ಈಗಲೂ ಮುಂದುವರಿದಿರುವ ಮಧ್ಯೆ ಕಾರ್ಕಳದ ನಮ್ಮ ಸಮಾಜದ ನಿವೃತ್ತ ಶಿಕ್ಷಕಿ ಕಾಗೆಯನ್ನು ಮಗುವಿನಂತೆ ಲಾಲನೆ–ಪಾಲನೆ ಮಾಡುತ್ತಿದ್ದಾರೆ. ಅಂಗಣಕ್ಕೆ ಕಾಲಿಟ್ಟರೆ ಸಾಕು ಅದು ಅವರ ಹೆಗಲೇರಿ ಜತೆಗೆ ಸಾಗುತ್ತಿರುತ್ತದೆ. ಇಂತಹದೊಂದು ಕಾಗೆ ಮತ್ತು ನಿವೃತ್ತ ಶಿಕ್ಷಕಿಯ ಆತ್ಮೀಯ ಬಂಧುತ್ವದ ಕಥೆ ತೆರೆದುಕೊಳ್ಳುವುದು ಕಾರ್ಕಳ ತಾಲೂಕಿನ ಕುಕ್ಕುಂದೂರು ಗ್ರಾಮದ ದುರ್ಗ ಹೈಸ್ಕೂಲ್ ಬಳಿ. ನಿವೃತ್ತ ಶಿಕ್ಷಕಿ ರಾಜೇಶ್ವರಿ ರಾವ್ ಅವರೇ ಈ ಕಾಗೆಯ ಪೋಷಕಿ.

ರಾಜೇಶ್ವರಿ ರಾವ್ ಅವರಿಗೆ ಪ್ರಾಣಿ–ಪಕ್ಷಿಗಳೆಂದರೆ ಅಪಾರ ಪ್ರೀತಿ. ಕಾಗೆ ಅವರ ಪಾಲಿಗೆ ಸ್ನೇಹಿತನಾಗಿ ಬಿಟ್ಟಿದೆ. ಬೆಳಗಾಗುತ್ತಲೇ ಅವರ ಮನೆ ಬಳಿ ಬರುವ ಈ ಕಾಗೆ ಅವರ ಹೆಗಲು, ತಲೆಯ ಮೇಲೆ ಕುಳಿತು ತನ್ನ ಪ್ರೀತಿ ತೋರುತ್ತದೆ. ಕಿವಿಯ ಬಳಿ ಕೊಕ್ಕನ್ನು ಇಟ್ಟು ಏನೋ ಪಿಸುಗುಟ್ಟುತ್ತದೆ! ಏನಾದರೂ ತಿಂಡಿ–ತಿನಿಸು ಕೊಡದೆ ಇದ್ದರೆ ಹಾರಿ ಹೋಗುವುದೇ ಇಲ್ಲ. ಇದು ನಿತ್ಯ ಪರಿಪಾಠ. ಈಗ ಅವರು ಕಾಗೆಗೆ ಅನ್ನ, ಹಾಲು, ಬಿಸ್ಕತ್ತು ನೀಡಿ ಮುದ್ದಿನಿಂದ ನೋಡಿಕೊಳ್ಳುತ್ತಾರೆ.

> ಇಷ್ಟೊಂದು ಪ್ರೀತಿ ತೋರಿಸುವ ಕಾಗೆಯನ್ನು ದೂರ ಮಾಡುವುದು ಹೇಗೆ? ನನಗೆ ಅನಿಷ್ಟದ ಮೇಲೆ ನಂಬಿಕೆ ಇಲ್ಲ. ಪ್ರೀತಿಯ ಮೇಲೆ ಮಾತ್ರ. ಅಂದು ಮರದಿಂದ ಕೆಳಗೆ ಬಿದ್ದ ಈ ಕಾಗೆ ಮರಿಯನ್ನು ಅದರ ತಾಯಿ ಕಾಗೆ ಬಹಿಷ್ಕರಿಸಿತು. ಆದರೆ ನಾನೂ ಕೂಡಾ ಆ ದಾರಿ ಹಿಡಿದಿದ್ದರೆ ಈ ಕಾಗೆ ಸಾವನ್ನಪ್ಪುತ್ತಿತ್ತು. ಸಾಕಿದವರ ಪ್ರೀತಿಯನ್ನು ಈ ಕಾಗೆ ಮರೆತಿಲ್ಲ. ನಿತ್ಯ ನಮ್ಮ ಮನೆಗೆ ಬರುತ್ತಿದೆ. ಒಂದರ್ಥದಲ್ಲಿ ಅದು ನನ್ನ ಸ್ನೇಹಿತನಂತಿದೆ.
>
> *– ರಾಜೇಶ್ವರಿ, ನಿವೃತ್ತ ಶಿಕ್ಷಕಿ*

**ಬಂದಿದ್ದು ಹೇಗೆ? :** ಹಲವು ತಿಂಗಳ ಹಿಂದೆ ರಾಜೇಶ್ವರಿ ರಾವ್ ಅವರ ತೆಂಗಿನ ಮರದಲ್ಲಿ ಕಾಗೆಯ ಗೂಡಿತ್ತು. ಕಾಗೆ ಮೊಟ್ಟೆ ಇಟ್ಟು ಮರಿಯಾಗುವ ಹಂತಕ್ಕೆ ಬಂದಾಗ ಗೂಡು ಇದ್ದ ತೆಂಗಿನ ಗರಿ ಧೊಪ್ಪನೆ ಬಿತ್ತು. ಮೂರು ಮರಿಗಳ ಪೈಕಿ ಎರಡು ಹಾರುವ ಸಾಮರ್ಥ್ಯ ಪಡೆದರೆ ಇನ್ನೊಂದು ಅಲ್ಲೇ ಹಾರುವ ಪ್ರಯತ್ನ ಮಾಡಿ ಸೋತು ಅಲ್ಪ ಸ್ವಲ್ಪ ಗಾಯಗಳೊಂದಿಗೆ ರಾಜೇಶ್ವರಿ ಅವರ ಕಣ್ಣಿಗೆ ಬಿತ್ತು. ಈ ಮರಿಯ ನೆರವಿಗೆ ತಾಯಿ ಕಾಗೆಯೂ ಬರಲೇ ಇಲ್ಲ. ಹಾಗಾಗಿ, ಕಾಗೆ ಮರಿಯನ್ನು ತಾನೇ ಸಾಕಲು ನಿರ್ಧರಿಸಿದರು ರಾಜೇಶ್ವರಿ.

ಒಂದು ಮರದಡಿ ಕಾಗೆಗೆ ರಕ್ಷಣೆ ನೀಡಿದರು. ನಿತ್ಯ ಆಹಾರ ಬಾಯಿಗಿಟ್ಟರು, ನೀರು ಕುಡಿಸಿದರು. 15 ದಿನದಲ್ಲಿ ಕಾಗೆ ರೆಕ್ಕೆ ಬಲಗೊಂಡು ಹಾರಲಾರಂಭಿಸಿತು. ಆದರೆ, ಕಷ್ಟಕಾಲದಲ್ಲಿ ಸಾಕಿ ಸಲಹಿದ ತಾಯಿಯ ಸೇವೆಯ ಋಣವನ್ನು ಅದು ಮರೆತಿಲ್ಲ! ಇವತ್ತಿಗೂ ಮುಂಜಾನೆ ಆ ಮನೆಗೆ ಬರುತ್ತಿದೆ. ಮನೆಯ ಬಾಗಿಲ ಬಳಿ ನಿಂತು ಕೂಗುತ್ತಿದೆ. ಅವರು ಮನೆಯಲ್ಲಿ ಕಾಣದಿದ್ದರೆ, ಕಿಟಕಿ ಹಾಗೂ ದ್ವಾರದ ಬಳಿ ನಿಂತು ಕರೆಯುತ್ತದೆ. ಅವರ ಕೈಯಲ್ಲಿ ಏನಾದರೂ ತುತ್ತು ಸಿಕ್ಕಿದ ಬಳಿಕವೇ ಅಲ್ಲಿಂದ ಹೊರಡೋದು. ಅಲ್ಲದೆ ಅವರು ಮನೆಯ ಸುತ್ತಮುತ್ತ ತಿರುಗುವ ವೇಳೆ ಅವರ ಹೆಗಲೇರಿ ತಿರುಗುತ್ತದೆ. ಜತೆಗೆ ಮನೆಯ ಹತ್ತಿರ ಪಾತ್ರೆಯಲ್ಲಿ ತುಂಬಿಸಿಟ್ಟ ನೀರಿನಲ್ಲಿ ಸ್ನಾನ ಕೂಡಾ ಮಾಡುತ್ತದೆ. ಆದರೆ, ಅನ್ಯರು ಮುಟ್ಟಲು ಬಂದರೆ ಅಟ್ಟಿಸಿಕೊಂಡು ಹೋಗುತ್ತದೆ.


**PREETHIKA AUTOMOBILES**

✆ 2493633
9845851573

*Wholesale & Retail Dealers in :*

***2 & 3 WHEELERS, SPARES & ACCESSORIES***

**KARANGALPADY, MANGALORE - 575 003**

***Dealers in :***

**Minda Switches, M. K. Products, Swiss Auto Products, Power Coils**



Phone : 0824 - 2440110, 2213946

**VISHRAM MOTORS (P.) LTD.**

**No. 4, Kodialbail Church Building**

**K. S. Rao Road, MANGALORE - 575 003**

***Authorised Dealers for :***

**Vijai Super GP 150 &**
**Vikram 3 Wheelers (Petrol & Diesel)**




## ಹೊಸ ಬಾಳಿನ ಹೊಸಿಲಲಿ ನಿಂತಿರುವ...



ಶ್ರೀ ಯಂ. ಪ್ರಸನ್ನ ಕುಮಾರ್ ಮತ್ತು ಶ್ರೀಮತಿ ವಂದನಾ ಪಿ.ಕೆ.ಯವರ ಪುತ್ರಿ **ಪ್ರಜ್ಞಾ** ಹಾಗೂ ಅಲೆವೂರು ಸಂತೋಷ್ ರಾವ್ ಮತ್ತು ರಾಜೀವಿಯವರ ಪುತ್ರ **ಸಂದೀಪ್**‌ರವರ ವಿವಾಹವು ತಾ. 03–02–2014ರಂದು ಪುತ್ತೂರು 'ಶ್ರೀ ಮಹಾಲಿಂಗೇಶ್ವರ ಸಭಾಭವನ'ದಲ್ಲಿ ನೆರವೇರಿತು.

*****

ಹಿರಿಯಡ್ಕ ಆಳುಗ್ಗೇಲು ಶ್ರೀಮತಿ ಶಾಲಿನಿ ಮತ್ತು ಶ್ರೀ ರಾಮಚಂದ್ರರಾಯರ ಜೇಷ್ಠ ಪುತ್ರ **ರೋಹಿತ್** ಹಾಗೂ ಶ್ರೀಮತಿ ಮತ್ತು ಕೀರ್ತಿಶೇಷ ದಿನೇಶರಾಯರ ಪುತ್ರಿ **ಅಪೂರ್ವ**ರವರ ವಿವಾಹವು ತಾ. 23–01–2014ರಂದು ಉಡುಪಿ, ಕುಂಜಿಬೆಟ್ಟಿನಲ್ಲಿರುವ 'ಶ್ರೀ ಶಾರದ ಕಲ್ಯಾಣ ಮಂಟಪ'ದಲ್ಲಿ ನೆರವೇರಿತು.

*****

ಚೊಕ್ಕಾಡಿ ಶ್ರೀ ಶಿವರಾವ್ ಮತ್ತು ಶ್ರೀಮತಿ ಜಾಹ್ನವಿ ಇವರ ಪುತ್ರಿ **ಚೇತನಾ** ಹಾಗೂ ಡಾ। ಎಂ. ಸತ್ಯನಾಥ ಮತ್ತು ಡಾ. ಗೀತಾ ಇವರ ಸುಪುತ್ರ **ಶಾಶ್ವತ್**‌ರವರ ವಿವಾಹವು ತಾ. 09–02–2014ರಂದು ಬೆಳ್ತಂಗಡಿ ಶ್ರೀ ಧರ್ಮಸ್ಥಳ ಮಂಜುನಾಥ ಸ್ವಾಮಿ ಕಲಾಭವನದಲ್ಲಿ ನಡೆಯಿತು.

## ಭವತಿ ಭಿಕ್ಷಾಂದೇಹಿ...



ಶ್ರೀಮತಿ ಮಾಲಿನಿ ಮತ್ತು ಶ್ರೀ ಪುಷ್ಪರಾಜ್‌ರವರ ಪುತ್ರ **ಚಿ. ಕಾರ್ತಿಕ್**‌ನ ಬ್ರಹ್ಮೋಪದೇಶ ಕಾರ್ಯಕ್ರಮವು ತಾರೀಕು 23–01–2014ನೇ ಗುರುವಾರದಂದು ಹಳೆಯಂಗಡಿ 'ರಾಮಾನುಗ್ರಹ ಸಭಾಭವನ'ದಲ್ಲಿ ಜರುಗಿತು.

*****

ಶ್ರೀಮತಿ ವಾಣಿ ಮತ್ತು ಶ್ರೀ ಶಿವಾನಂದರವರ ಪುತ್ರ **ಚಿ. ಈಶಾನ್**‌ನ ಬ್ರಹ್ಮೋಪದೇಶ ಕಾರ್ಯಕ್ರಮವು ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾ ಸದನದಲ್ಲಿ ತಾರೀಕು 02–02–2014ನೇ ಆದಿತ್ಯವಾರದಂದು ನಡೆಯಿತು.

*****

ಶ್ರೀಮತಿ ವಾಣಿ ಮತ್ತು ಶ್ರೀ ಸುಭಾಷ್ಚಂದ್ರರ ಪುತ್ರ **ಚಿ. ದೇವಿಪ್ರಸಾದ್**‌ನ ಬ್ರಹ್ಮೋಪದೇಶ ಕಾರ್ಯಕ್ರಮವು ತಾ. 22–01–2014ನೇ ಬುಧವಾರದಂದು ಬಳ್ಕೂರಿನ ಅವರ ಸ್ವಗೃಹದಲ್ಲಿ ನಡೆಯಿತು.

*****

ಶ್ರೀಮತಿ ಸುಮಂಗಲ ಮತ್ತು ಶ್ರೀ ಬಾಲಕೃಷ್ಣ ಮೈಸೂರು ಇವರ ಪುತ್ರ **ಚಿ. ಪ್ರಜ್ವಲ್ ಕುಮಾರ**ನ ಬ್ರಹ್ಮೋಪದೇಶ ಕಾರ್ಯಕ್ರಮವು ತಾ. 09–02–2014ನೇ ರವಿವಾರದಂದು ಎಂ.ಎಲ್. ವರ್ಧಮಾನಯ್ಯ ಸ್ಮಾರಕ ಭವನ, ಹರ್ಷ ರಸ್ತೆ, ಮೈಸೂರಿನಲ್ಲಿ ನೆರವೇರಿತು.

## ಮನೆಯೇ ಮಂತ್ರಾಲಯ...



ಕೊಡಿಯಾಲ್‌ಬೈಲ್‌ನ ಮೌರಿಷ್ಕ ಪಾರ್ಕ್‌ನಲ್ಲಿ ಶ್ರೀಮತಿ ಪ್ರಮೀಳ ಮತ್ತು ಶ್ರೀ ಗುರುಪ್ರಸಾದ್ ರಾವ್‌ರವರು ನೂತನವಾಗಿ ನಿರ್ಮಿಸಿರುವ ಮನೆ **"ಸಾತ್ವಿಕ್"** ಇದರ ಗೃಹಪ್ರವೇಶವು ವಿವಿಧ ಧಾರ್ಮಿಕ ವಿಧಿ–ವಿಧಾನಗಳೊಂದಿಗೆ ತಾ. 26–01–2014ನೇ ರವಿವಾರದಂದು ನಡೆಯಿತು.

## ಒಂದು ವಿಜ್ಞಾಪನೆ

'ಜ್ಞಾನಶಕ್ತಿ' ಪತ್ರಿಕೆಯನ್ನು ಆರ್ಥಿಕವಾಗಿ ಸುದೃಢಗೊಳಿಸುವ ದೃಷ್ಟಿಯಿಂದ ಸಮಾಜ ಬಾಂಧವರು ಉದಾರ ಧನಸಹಾಯವನ್ನು ಹಾಗೂ ಜಾಹೀರಾತುಗಳನ್ನು ನೀಡಿ ಸಹಕರಿಸಬೇಕಾಗಿ ವಿನಂತಿಸುತ್ತೇವೆ.

**ಜಾಹೀರಾತು ದರ**

**1) 6 ಸಂಚಿಕೆಗಳು (ನಿರ್ದಿಷ್ಟ ಸ್ಥಳಾವಕಾಶ) - ರೂ. 600/-**

**2) 12 ಸಂಚಿಕೆಗಳು (ನಿರ್ದಿಷ್ಟ ಸ್ಥಳಾವಕಾಶ) - ರೂ. 1000/-**


ಎಲ್ಲೈಸಿ ಪಾಲಿಸಿಗಳ ಪುನರುಜ್ಜೀವನ (Lapsed Policy Revival) ಕ್ಲೇಮ್, ಸರೆಂಡರ್, ಲೋನ್, ನಾಮಿನೇಶನ್ ಇತ್ಯಾದಿ ಸರ್ವೀಸ್‌ಗಳನ್ನು ನೀಡಲಾಗುವುದು ಹಾಗೂ ಇಚ್ಚೆಪಟ್ಟಲ್ಲಿ ಅವರಿಗೆ ಹೊಂದಿಕೆಯಾಗುವಂತಹ ಹೊಸ ಪಾಲಿಸಿಗಳನ್ನು ಮಾಡಿಕೊಡಲಾಗುವುದು. ಅಲ್ಲದೆ ಮೋಟರ್ ವೆಹಿಕಲ್ ಇನ್ಶೂರೆನ್ಸ್, ಹೆಲ್ತ್ ಇನ್ಶೂರೆನ್ಸ್, ಪಾನ್ ಕಾರ್ಡ್ ಹಾಗೂ ಮ್ಯೂಚುವಲ್ ಫಂಡ್ ಇನ್‌ವೆಸ್ಟ್‌ಮೆಂಟ್ ಮಾಡಿಕೊಡಲಾಗುವುದು.

LIC

***ಸಂಪರ್ಕಿಸಿರಿ :***

**ಪಿ. ರಾಜೇಂದ್ರ ರಾವ್,** ಬಿ.ಎಸ್ಸಿ.

**ಕುಂಜತ್ತಬೈಲ್, ಮಂಗಳೂರು, ಮೊಬೈಲ್ : 9242214842**

# ನೇಪಾಲ ಪ್ರವಾಸ

ಪ್ರವಾಸ ಕಥನ :
ಶ್ರೀಮತಿ ಕನಕವಲ್ಲಿ ಹರ್ಷಕುಮಾರ್
ಮಂಗಳೂರು


ತಾ. 3-12-2013ರಂದು ನೇಪಾಲ ಪ್ರವಾಸಕ್ಕಾಗಿ ಡೆಲ್ಲಿಯಿಂದ Spice Jetನಲ್ಲಿ ಖಟ್‌ಮಾಂಡ್‌ನ "ತ್ರಿಭುವನ್ ಇಂಟರ್ ನ್ಯಾಶನಲ್" ವಿಮಾನ ನಿಲ್ದಾಣಕ್ಕೆ ಸಂಜೆ ಗಂಟೆ 6-30ಕ್ಕೆ ತಲುಪಿದೆವು. ವಿಮಾನ ನಿಲ್ದಾಣದ ಹೊರಗಡೆ ನಮ್ಮನ್ನು ಅಲ್ಲಿಯ ಲಯನ್ಸ್ ಸದಸ್ಯರು ತಿಲಕವಿಟ್ಟು ಶಾಲುಹಾಕಿ ಸ್ವಾಗತಿಸಿದರು. ಮಕ್ಕಳು ಸುಂದರ ನೃತ್ಯ ನೀಡಿ ಮನರಂಜಿಸಿದರು. ರಿಯಾ ಟ್ರಾವೆಲ್ಸ್‌ನವರ ಗೈಡ್ 'ಸಮ್ಮುಲ್ಲಾ' ಎಂಬವರು ನಮ್ಮೊಂದಿಗೆ ಇದ್ದರು.

ಮರುದಿನ ಬೆಳಗ್ಗೆ (4 ತಾರೀಕಿಗೆ) ನೇಪಾಲದ ಪ್ರಸಿದ್ಧ ದೇವಸ್ಥಾನವಾದ 'ಪಶುಪತಿ'ನಾಥ ದೇವಸ್ಥಾನಕ್ಕೆ ನಾವೆಲ್ಲ ತೆರಳಿದೆವು. ಅದು ಬಹಳ ಸುಂದರ ದೇವಸ್ಥಾನ. ನಮ್ಮ ದೇಶದ ಕಾಶಿಯನ್ನು ನೆನಪಿಗೆ ತರುತ್ತದೆ. ಅಲ್ಲಿ ಪೂಜೆ ಮಾಡಿಸಿದವರಿಗೆ ರುದ್ರಾಕ್ಷಿ ಮಾಲೆ ಕೊಡುತ್ತಾರೆ. ನೇಪಾಲದಲ್ಲಿ ರುದ್ರಾಕ್ಷಿ ಮರ ತುಂಬಾ ಇದೆ. ನಾವೆಲ್ಲ ರುದ್ರಾಕ್ಷಿ ಮರವನ್ನು ಹತ್ತಿರ ಹೋಗಿ ನೋಡಿದೆವು. 'ಶರತ್' ಎಂಬ ನೇಪಾಲಿ ಗೈಡ್ ನಮ್ಮೊಂದಿಗೆ ಇದ್ದರು. ನೇಪಾಲವು





147–181 sq km ಅಗಲದ ಸುತ್ತಳತೆಯನ್ನು ಹೊಂದಿರುವ ಸಣ್ಣ ದೇಶ. ಇಲ್ಲಿನ ಜನಸಂಖ್ಯೆ ಸಾಧಾರಣ 2 ಕೋಟಿಯಷ್ಟು. 'ಖಟ್‌ಮಾಂಡ್' ಇಲ್ಲಿನ ರಾಜಧಾನಿ. 80% ಹಿಂದೂಗಳು ಹಾಗೂ 20% ಇತರ ಧರ್ಮೀಯರು ವಾಸವಾಗಿದ್ದಾರೆ. ಅಲ್ಲಿಯ ರಾಜನ ಅರಮನೆಯನ್ನು ನಾವು ಬಸ್ಸಿನಲ್ಲೇ ಕುಳಿತು ವೀಕ್ಷಿಸಿದೆವು. ನೇಪಾಲಿ ಅಲ್ಲಿನ ಸ್ಥಳೀಯ ಭಾಷೆ. ನಮ್ಮ 100 ರೂಪಾಯಿಗೆ ಅವರ 162 ನೇಪಾಲಿ



ಹಣ ದೊರೆಯುತ್ತದೆ. ಎಲ್ಲಾ ಕಡೆ ನಮ್ಮ 100 ರೂಪಾಯಿ ಚಲಾವಣೆಯಲ್ಲಿ ಇದೆ. ನೇಪಾಲದ ಪೂರ್ವ, ಪಶ್ಚಿಮ, ದಕ್ಷಿಣ ಭಾಗದಲ್ಲಿ ಭಾರತವು ಉತ್ತರದಲ್ಲಿ ಚೀನಾದೇಶವಿದೆ. ನೇಪಾಲದ ಪ್ರಕೃತಿ ಸೌಂದರ್ಯವು ಅತ್ಯದ್ಭುತ. ಸುತ್ತಲೂ ಹಿಮಾಲಯ ಪರ್ವತ. ಹಚ್ಚಹಸುರಿನ ಗಿಡ ಮರಗಳು. ಪರ್ವತದ ಮೇಲೆ ಬಿದ್ದಿರುವ ಹಿಮರಾಶಿಯು ಸೂರ್ಯನ ರಶ್ಮಿಗೆ ನೀರಾಗಿ ಹರಿಯುವುದನ್ನು ನೋಡಲು ಎರಡು ಕಣ್ಣುಗಳು ಸಾಲದು ಎಂದೆನಿಸುತ್ತದೆ. ಮಾರ್ಗದ ಉದ್ದಕ್ಕೂ ಸುಂದರ ನದಿಗಳು ಹರಿಯುವುದು ಕಾಣಸಿಗುತ್ತದೆ. ಪ್ರಪಂಚದಲ್ಲಿ ಅತೀ ಎತ್ತರವಾಗಿರುವ ಎವರೆಸ್ಟ್ ಶಿಖರದ ಎತ್ತರವು 8,848 ಮೀಟರ್‌ಗಳು. ಅನ್ನಪೂರ್ಣ ಶಿಖರ, ಗೌರಿಶಂಕರ ಶಿಖರ ಹೀಗೆ ಅತ್ಯಂತ ಎತ್ತರದ ಹಲವಾರು ಶಿಖರಗಳಿವೆ. ಹಲವಾರು ವಿದೇಶಿಯರು ಇಲ್ಲಿಗೆ ಪರ್ವತಾರೋಹಣಕ್ಕಾಗಿ ಬರುತ್ತಾರೆ. ಇಲ್ಲಿಯ 'ಶೆರ್ಪ' ಜನಾಂಗದ ಜನರು ಇವರಿಗೆ ಸಹಾಯ ಮಾಡುತ್ತಾರೆ. ಬುದ್ಧನ ಜನ್ಮಸ್ಥಳವಾದ ಲುಂಬಿನಿ, ಸೀತೆಯ ಜನ್ಮಸ್ಥಳವಾದ ಜನಕಪುರದಲ್ಲಿ 'ಜಾನಕಿ' ದೇವಸ್ಥಾನವಿದೆ. ಬಹಳ ಸುಂದರ ದೇವಾಲಯ ಸ್ವಯಂಬುತ ಅತೀ ದೊಡ್ಡ ಬುದ್ಧ ಸ್ತೂಪ ವೀಕ್ಷಿಸಿದೆವು. ಪಾಟಾನ್ ದರ್ಬಾರ್ square ಗೆ ಹೋಗಿ ಬೇರೆ ಬೇರೆ ರಾಜರು ನಿರ್ಮಿಸಿದ ಅತ್ಯದ್ಭುತ ದೇವಾಲಯುಗಳು, ವಸ್ತುಸಂಗ್ರಹಾಲಯುಗಳನ್ನು ವೀಕ್ಷಿಸಿದೆವು. ಒಂದೇ ಕಲ್ಲಿನಿಂದ ನಿರ್ಮಿಸಿದ ಸುಂದರ ಕೆತ್ತನೆಯ 'ಶ್ರೀ ಕೃಷ್ಣ' ದೇವಾಲಯವು ಎಲ್ಲರ ಮನ ಸೂರೆಗೊಂಡಿತು. ಬಳಿಕ ನಾವು ಸೂರ್ಯಾಸ್ತ ನೋಡಲು 'ನಾಗರ್‌ಕೋಟೆ'ಗೆ ಹೋದೆವು. ನಾವು ಮಂಗಳೂರಿನಲ್ಲಿ ಸಮುದ್ರದಲ್ಲಿ ಸೂರ್ಯಾಸ್ತ ನೋಡಿದರೆ ಅಲ್ಲಿ ಪರ್ವತ ಸಾಲಿನ ನಡುವೆ ಸೂರ್ಯಾಸ್ತ ನೋಡಿ ಸಂತೋಷ ಗೊಂಡೆವು. ಮರುದಿನ ಬೆಳಗ್ಗೆ ನಾವು ತಂಗಿದ್ದ ಹೋಟೇಲಿನ ಮೇಲ್ಛಾವಣಿಗೆ ಹೋಗಿ ಹಿಮಾಲಯದ ಮಧ್ಯೆ ಸೂರ್ಯೋದಯ ವೀಕ್ಷಿಸಿ ಆನಂದಿಸಿದೆವು. ಅಲ್ಲಿಂದ ನಾವು 'ಪೋಕ್ರ'ಗೆ ತೆರಳಿದೆವು. ಎ.ಸಿ. ಬಸ್ಸಿನಲ್ಲಿ 7-00 ಗಂಟೆಗಳ ಪ್ರಕೃತಿ ಸೌಂದರ್ಯ ವೀಕ್ಷಿಸುತ್ತಾ ಪ್ರಯಾಣ. ಅಲ್ಲಿ ತಲುಪಿದಾಗ ರಾತ್ರಿಯಾಗಿತ್ತು. ಎಲ್ಲಾ ಹೋಟೇಲುಗಳಲ್ಲಿ ಅಲ್ಲಿನ ನೃತ್ಯಗಾತಿಯರು, ನೃತ್ಯಗಾರರು ವಿವಿಧ ರೀತಿಯ ನೃತ್ಯಗಳಿಂದ ನಮ್ಮ ಮನರಂಜಿಸುತ್ತಾರೆ. ಪೋಕ್ರವು ಸ್ವಚ್ಛ ಹಾಗೂ ಸುಂದರ ಸಿಟಿ. ನಮ್ಮ ಹೋಟೇಲ್ 'ಲ್ಯಾಂಡ್‌ಮಾರ್ಕ್'ನ ಪಕ್ಕದಲ್ಲಿ ಸುಂದರ ಪರ್ವತಶ್ರೇಣಿ ಬುಡದಲ್ಲಿ ಮನಮೋಹಕ ಸರೋವರ. ಸಾಯಂಕಾಲ ಎಲ್ಲರೂ ಅದರಲ್ಲಿ ದೋಣಿವಿಹಾರಕ್ಕೆ ಹೋದೆವು. ಮರುದಿನ ಬೆಳಗ್ಗೆ 7-00 ಗಂಟೆಗೆ ನಮ್ಮ ಪ್ರಯಾಣ ಪ್ರಾರಂಭ. 'ದೇವಿಸ್' ಜಲಪಾತ, 'ಸೇತಿ' ನದಿ, ಬಿಂದು ಸ್ವಾಮಿ ದೇವಸ್ಥಾನ, ಗುಪ್ತೇಶ್ವರ ಮಹಾದೇವ ಗುಹೆ ವೀಕ್ಷಿಸಿ, ಶಾಪಿಂಗ್ ಮಾಡಿದೆವು. ಮರುದಿವಸ 'ಮನೋಕಾಮನ' ದೇವಸ್ಥಾನಕ್ಕೆ ತೆರಳಿದೆವು. ಕೇಬಲ್‌ಕಾರ್ ಮೂಲಕ ಹೋಗಬೇಕು. ಮೂರು ಪರ್ವತಗಳನ್ನು ಕೇಬಲ್‌ಕಾರ್‌ನಲ್ಲಿ ದಾಟುತ್ತಾ, ಸುತ್ತಲೂ ಕಿತ್ತಳೆ ತೋಟವನ್ನು ವೀಕ್ಷಿಸುತ್ತಾ ಸಾಗಿದೆವು. ಅಲ್ಲಿಂದ 50 ಮೆಟ್ಟಿಲುಗಳನ್ನು ಹತ್ತಬೇಕು. ಅಲ್ಲಿ ಈಗಲೂ ಕೋಳಿ, ಕುರಿ, ಕೋಣ ಇವುಗಳ ಬಲಿ ನಡೆಯುತ್ತಿರುತ್ತದೆ. ತುಂಬಾ ನೂಕುನುಗ್ಗಲು. ನಾವು ಹೋದ ದಿವಸ 5 ಸಾವಿರ ಜನ ದೇವರ ದರ್ಶನಕ್ಕೆ ಬಂದಿದ್ದರು. ಟಿಕೆಟ್ ಪಡೆದೆ ಹೋಗಬೇಕು. 5-00 ಗಂಟೆಗೆ ಕೇಬಲ್‌ಕಾರಿನ ಟಿಕೆಟನ್ನು ನೀಡುವುದನ್ನು ನಿಲ್ಲಿಸುತ್ತಾರೆ. ಅಲ್ಲಿ ಕೆ.ಜಿ.ಗೆ 20 ರೂಪಾಯಿಗೆ ಗಿಡದಿಂದ ಆಗತಾನೆ ತೆಗೆದ ಕಿತ್ತಳೆ ಸಿಗುತ್ತದೆ. ತುಂಬಾ ರುಚಿಯಾಗಿರುತ್ತದೆ. ದೇವಸ್ಥಾನ ದರ್ಶನ ಮಾಡಿದ ಬಳಿಕ ನಮಗೆ ಏನೋ ಒಂದು ಧನ್ಯತಾಭಾವ ಮೂಡುತ್ತದೆ. ಅಲ್ಲಿಂದ ಪುನಃ ಖಟ್‌ಮಾಂಡ್‌ಗೆ ನಮ್ಮ ಪ್ರಯಾಣ. ಮರುದಿವಸ ಬೆಳಗ್ಗೆ 4-00 ಗಂಟೆಗೆ ಎದ್ದು ನಾವೆಲ್ಲ ಎವರೆಸ್ಟ್ ಶಿಖರದ ತುದಿಗೆ ತಲುಪಲು ಸಿದ್ಧಗೊಂಡೆವು. ನಮ್ಮ ಟಿಕೇಟಿನ ಹಣವಲ್ಲದೆ ಪುನಃ ಅದಕ್ಕಾಗಿ ಒಬ್ಬೊಬ್ಬರು 7 ಸಾವಿರ ನೀಡಬೇಕು. 21 ಮಂದಿ ಕುಳಿತುಕೊಳ್ಳುವ 'ಯಾತ್ರಿ' ಎಂಬ ಸಣ್ಣ ವಿಮಾನ. ಪ್ರತಿಯೊಬ್ಬರಿಗೂ ಒಂದೊಂದು ದೊಡ್ಡ ಕಿಟಕಿ ಬಳಿ ಹೊರಗಿನ ದೃಶ್ಯಾವಳಿ ನೋಡಲು ಅವಕಾಶ. ಅದರೊಳಗೆ ಇಬ್ಬರು ವಿಮಾನ ಚಾಲಕರು ಮತ್ತು ಒಬ್ಬಳು ಗಗನಸಖಿ ಇರುತ್ತಾಳೆ. ಪ್ರತಿಯೊಬ್ಬರನ್ನು ವಿಮಾನ ಚಾಲಕನ ಬಳಿ ನಿಲ್ಲಿಸಿ ಹೊರಗಿನ ದೃಶ್ಯಾವಳಿಗಳನ್ನು ವಿವರಿಸುತ್ತಾಳೆ. ಆ ಹಿಮದ ರಾಶಿ, ಕಲ್ಲು ಬಂಡೆಗಳ ನಡುವೆ ನಮ್ಮನ್ನು ನಿಧಾನವಾಗಿ ಬಹಳ ಕೆಳಗಿನಿಂದ ನಮಗೆ ತೋರಿಸುತ್ತಾ ವಿವರಣೆ ನೀಡುತ್ತಾರೆ. ಆ ಪ್ರಕೃತಿ ಸೌಂದರ್ಯವನ್ನು ಸವಿಯುವಾಗ ನಮಗೆ ಆದ ಆನಂದಕ್ಕೆ ಪಾರವೇ ಇಲ್ಲ. ನಮ್ಮ ಜೀವನ ಸಾರ್ಥಕವೆಂದು ನಮ್ಮೊಂದಿಗೆ ಇದ್ದ ಎಲ್ಲರೂ ಉದ್ಗರಿಸಿದರು. ವಿಮಾನದ ಕೆಳಗೆ ಇಳಿದ ಕೂಡಲೇ "Above the clouds with yathri" ಎಂದು ನಮಗೆ ಒಂದೊಂದು ಸರ್ಟಿಫಿಕೇಟನ್ನು ನೀಡುತ್ತಾರೆ. ಅಲ್ಲಿಂದ ನಾವು ತ್ರಿಭುವನ್ ಇಂಟರ್ ನ್ಯಾಶನಲ್ ಪೋರ್ಟ್‌ಗೆ ತೆರಳಿ ಸುಖವಾಗಿ ಬಂದು ಮಂಗಳೂರು ತಲುಪಿದೆವು. ಈಗಲೂ ನೇಪಾಲ ನೆನಪಾದಾಗ ಆ ಸುಂದರ ಪರ್ವತ ಶ್ರೇಣಿಗಳು, ಧುಮುಕಿ ಹರಿಯುವ ದೊಡ್ಡ ದೊಡ್ಡ ನದಿಗಳು ಕಣ್ಣ ಮುಂದೆ ಬಂದು ಮಾಯವಾದಂತನ್ನಿಸುತ್ತದೆ. ●


## ವಧೂವರರ ವಿವಾಹ ವೇದಿಕೆ



**ನಮ್ಮ ಸಮಾಜ ಬಾಂಧವರ ಗಮನಕ್ಕೆ -**

ವಧೂವರರ ವಿವಾಹ ವೇದಿಕೆಯನ್ನು ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ಪ್ರಾರಂಭಿಸಿ, ಇದರ ಉಪಯುಕ್ತತೆಯನ್ನು ನಮ್ಮ ಸಮಾಜ ಬಾಂಧವರು ಪಡೆದುಕೊಂಡಿದ್ದಾರೆ. ಇನ್ನು ಮುಂದೆಯೂ ಈ ವೇದಿಕೆಯ ಸದುಪಯೋಗ ಪಡೆದುಕೊಳ್ಳಬಹುದು.

*ಸಂಪರ್ಕಿಸಿರಿ :*

ಶ್ರೀ ಚೇತನ್ ಶರ್ಮ : 9844187083
ಶ್ರೀ ಎನ್. ಶಶಿಕಾಂತ್ ರಾವ್ : 9341988753
ಶ್ರೀಮತಿ ವೈಜಯಂತಿ ರಾವ್ ಬೆಳ್ಳೆ : 9242204848

E-mail : gbicsm@gmail.com

## ಶ್ರೀ ಸುಬ್ರಹ್ಮಣ್ಯ ಸಭಾ (ರಿ.), ಮಂಗಳೂರು


ಸಮಾಜ ಬಾಂಧವರೇ,

ಯಶಸ್ವಿ 3ನೇ ವರುಷದಲ್ಲಿ ಸಾಗುತ್ತಿರುವ 'ಜ್ಞಾನಶಕ್ತಿ' ಮಾಸಪತ್ರಿಕೆಯನ್ನು ಸದಾಕಾಲ ನಿಮಗೆ ನೀಡುವ ಉದ್ದೇಶದಿಂದ ಪತ್ರಿಕೆಗೆ ಈ ಕೆಳಗಿನಂತೆ ಚಂದಾದಾರವನ್ನು ನಿಗದಿಪಡಿಸಲಾಗಿದೆ.



| | | | |
|---|---|---|---|
| ಮಹಾ ಪೋಷಕರು | – | ರೂ. | 10,000/- |
| ಪೋಷಕರು | – | ರೂ. | 5,000/- |
| ಆಜೀವ ಚಂದಾ ದರ | – | ರೂ. | 500/- |

ಚೆಕ್ ಅಥವಾ ಡಿ.ಡಿ.ಗಳನ್ನು 'ಜ್ಞಾನಶಕ್ತಿ' ಹೆಸರಿನ ಮೂಲಕ ಸುಬ್ರಹ್ಮಣ್ಯ ಸಭಾ, ಕೊಡಿಯಾಲ್‌ಬೈಲ್, ಮಂಗಳೂರು - 575 003ಕ್ಕೆ ಕಳುಹಿಸಬಹುದು.
ಹೆಚ್ಚಿನ ಮಾಹಿತಿಗಾಗಿ *ಶ್ರೀ ಪಿ. ಶ್ರೀಕಾಂತ್ ರಾವ್ ಮೊಬೈಲ್ : 09363361618.*




## ಜ್ಞಾನ – ನುಡಿ

ಬೇರೆಯವರು ತುಳಿದ ಹಾದಿಯಲ್ಲಿ ನೀವು ಹೋದರೆ ಏನು ಸಾಧಿಸಿದಂತಾಗುತ್ತದೆ. ಬದಲಿಗೆ ಬೇರೆ ಹಾದಿ ತುಳಿಯಿರಿ. ಅಲ್ಲಿ ನಿಮಗೆ ಹೊಸ ಅನುಭವ, ಸಾಹಸ, ರೋಮಾಂಚನ ಎಲ್ಲವೂ ಸಿಕ್ಕುತ್ತದೆ. ಕುರುಡು ಅನುಕರಣೆಯಿಂದ ಏನನ್ನೂ ಸಾಧಿಸಲಾಗುವುದಿಲ್ಲ. **–ನೆಪೋಲಿಯನ್**

## ಜ್ಞಾನ – ಗಾದೆ

ಏರ್ನ ಕಣ್ಣಲಾ ಕಟ್ಟೊಲಿ, ಆಂಡ ದೇವರ್ನತ್ತ್
ಏರ್ ಸತ್ಯನ್ ಬುಡ್ಪರಿಯನಾ ಆಯೆನಾ ಬದಕ್ ಬಂಗಾರ್
ಏರೇರ್ನ ಪುಣ ತುಂಬಿನಾಯಗ್, ಆಯೆನ ಪುಣ ತುಂಬೆರೆ ಜನ ಇಜ್ಜಿ.

## ಜ್ಞಾನ – ನಗೆ

**ಅಮ್ಮಾವ್ರ ಗಂಡ**

**ಮಗ :** ನಾನು ಅಮ್ಮನ ಅನುಮತಿಯಿಲ್ಲದೆ ಹೊರಗೆ ಹೋಗುವಷ್ಟು ದೊಡ್ಡವನಾಗುವುದು ಯಾವಾಗಪ್ಪ?

**ಅಪ್ಪ :** ನಿನ್ನ ವಿಷಯ ಹಾಗಿರಲಿ, ನಾನು ಕೂಡಾ ಈ ತನಕ ಅಷ್ಟು ದೊಡ್ಡವನಾಗಿಲ್ಲ ಕಣೋ!

## ಜ್ಞಾನ – ವಿಸ್ಮಯ

ತಗಡಿನ ಡಬ್ಬಿಯಲ್ಲಿ ಸ್ಥಳೀಯವಾಗಿ ಮಾಡಿದ ಎಫ್‌ಎಂ ರೇಡಿಯೋ 'ಕಮಿಂಗ್ ಸೂನ್ ಮೋದಿ ರಾಜ್' ಎಂಬ ಹೆಸರಿನ ಇದನ್ನು ಅಹ್ಮದಾಬಾದ್‌ನಲ್ಲಿ ತಯಾರಿಸಿ ಬಿಕರಿ ಮಾಡಲಾಗುತ್ತಿದೆ. ಎಂಪಿ3 ಪ್ಲೇಯರ್ ಹಾಗೂ ಪೆನ್‌ಡ್ರೈವ್ ಜಾಗ ಹೊಂದಿದೆ!

Please log on to : www.subramanyasabha.com For all information on Subramanya Sabha and Address of Stanika in Mangalore, Bantwal & Moodabidri

*Publisher : Sri C. S. Rao, President, Shree Subrahmanya Sabha (R.), Kodialbail, Mangalore - 3*
*Editor : Sri M. S. Raghunath Rao, Darbe, Puttur*
*Printed at : Rajesh Power Press, Darbe - 574 202, Puttur, D. K.*